National Education Society ®

# JAWAHARLAL NEHRU NATIONAL COLLEGE OF ENGG. SHIVAMOGGA

(Approved by AICTE, New Delhi, Certified by UGC 2f & 12B, Accredited by NAAC –'B', Recognized by Govt. of Karnataka and Affiliated to VTU, Belagavi)




39 Years of Fruitful Service

# JNNCE @ PRESS | MEDIA COVERAGE 2018-19



# PRESS MEDIA COVERAGE

ಪ್ರಜಾವಾಣಿ

ಮಂಗಳವಾರ • ಆಗಸ್ಟ್ 28, 2018

## ರಾಷ್ಟ್ರೀಯ ಮಟ್ಟದ ಕಾರ್ಯಾಗಾರ

ಶಿವಮೊಗ್ಗ: ಜೆಎನ್‌ಎನ್‌ಸಿ ಎಂಬಿಎ ಸೆಮಿನಾರ್ ಸಭಾಂಗಣದಲ್ಲಿ ಆ. 29ರಿಂದ ಸೆ.2ರ ವರೆಗೆ 'ಅಡ್ವಾನ್ಸಸ್ ಇನ್ ಸ್ಯಾಟಲೈಟ್ ಕಮ್ಯುನಿಕೇಷನ್ ಅಂಡ್ ನೆಟ್ ವರ್ಕಿಂಗ್' ವಿಷಯದ ಕುರಿತು ಒಂದು ವಾರದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ಆಯೋಜಿಸಲಾಗಿದೆ.

29ರಂದು ಬೆಳಿಗ್ಗೆ 9.30ಕ್ಕೆ ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ಡಾ. ಮಂಜುನಾಥ ಕೆ. ನಾಯ್ಕ್, ಡಾ.ಎಸ್. ರಂಗರಾಜನ್ ಭಾಗವಹಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಆರ್. ಮಹಾದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಪ್ರಜಾವಾಣಿ

ಶನಿವಾರ • ಸೆಪ್ಟೆಂಬರ್ 1, 2018

## 'ನಿಖರ ಕೃಷಿಗೆ ಉಪಗ್ರಹ ಸಹಕಾರಿ'



ಶಿವಮೊಗ್ಗ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ 'ಅಡ್ವಾನ್ಸ್ ಇನ್ ಸ್ಯಾಟಲೈಟ್ ಕಮ್ಯುನಿಕೇಷನ್ಸ್ ಅಂಡ್ ನೆಟ್‌ವರ್ಕಿಂಗ್' ವಿಷಯ ಕುರಿತ ಕಾರ್ಯಾಗಾರಕ್ಕೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಡಾ.ಮಂಜುನಾಥ ಕೆ.ನಾಯ್ಕ ಈಚೆಗೆ ಚಾಲನೆ ನೀಡಿದರು.

ಶಿವಮೊಗ್ಗ: ನೀರಿನ ಮೂಲಗಳನ್ನು ಪತ್ತೆಹಚ್ಚಲು ಉಪಗ್ರಹ ಸಹಕಾರಿ ಎಂದು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಡಾ.ಮಂಜುನಾಥ ಕೆ.ನಾಯ್ಕ ಅಭಿಪ್ರಾಯಪಟ್ಟರು.

ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಟೆಲಿ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದಿಂದ ಬುಧವಾರ ಏರ್ಪಡಿಸಿದ್ದ 'ಅಡ್ವಾನ್ಸ್ ಇನ್ ಸ್ಯಾಟಲೈಟ್ ಕಮ್ಯುನಿಕೇಷನ್ಸ್ ಅಂಡ್ ನೆಟ್‌ವರ್ಕಿಂಗ್' ವಿಷಯ ಕುರಿತ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹವಾಮಾನ ಬದಲಾವಣೆ ಗಮನಿಸಿ ನೈಸರ್ಗಿಕ ಸಂಪನ್ಮೂಲಗಳನ್ನು ಹಾಗೂ ನೀರಿನ ಮೂಲಗಳನ್ನು ಪತ್ತೆಹಚ್ಚಲು ಉಪಗ್ರಹಗಳು ಸಹಾಯಕ. ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ನೆಲದ ನೀರಿನ ಮಟ್ಟ ಪತ್ತೆ ಹಚ್ಚಲು ಹಾಗೂ ಅಗತ್ಯವಾದ ನಿಖರ ಕೃಷಿಗಾಗಿ ಸಹಾಯ ಪಡೆಯಲು ಉಪಗ್ರಹಗಳ ಅವಶ್ಯಕತೆ ಸಾಕಷ್ಟಿದೆ ಎಂದರು.

ಇಸ್ರೊ ಮಾಜಿ ನಿರ್ದೇಶಕ ಡಾ.ರಂಗರಾಜನ್ ಮಾತನಾಡಿ, 'ಇಸ್ರೊ ಮತ್ತು ಶೈಕ್ಷಣಿಕ ಸಂಸ್ಥೆಗಳ ನಡುವಿನ ಅಂತರ ಕಡಿಮೆ ಮಾಡಲು ಮತ್ತು ಉಪಗ್ರಹಗಳಿಗೆ ಉಪಕರಣಗಳನ್ನು ನಿರ್ಮಿಸಲು ವಿದ್ಯಾರ್ಥಿಗಳು ಶ್ರಮಿಸಬೇಕು. ಅಲ್ಲದೇ ಒಂದು ವಾರ ನಡೆಯುವ ಈ ಕಾರ್ಯಾಗಾರದಲ್ಲಿ ಇಸ್ರೊ ಸೇರಿ ಪ್ರಸಿದ್ಧ ಸಂಸ್ಥೆಗಳಿಂದ 13 ಶ್ರೇಷ್ಠ ವಿಜ್ಞಾನಿಗಳು ಉಪನ್ಯಾಸ ನೀಡಲಿದ್ದು, ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು' ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಆರ್. ಮಹಾದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಡಾ.ಎಲ್.ಕೆ.ಶ್ರೀಪತಿ, ಸಿಂಗಪುರದ ಎಸ್.ಟಿ.ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಡಾ.ನಾಗರಾಜನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ರಾಷ್ಟ್ರೀಯ ಶಿಕ್ಷಣ ಸಮಿತಿಯ ಪದಾಧಿಕಾರಿಗಳಾದ ಎ.ಎಸ್.ವಿಶ್ವನಾಥ, ಎಸ್. ಎನ್.ನಾಗರಾಜ, ಟಿ.ಆರ್. ಅಶ್ವಥ್ ನಾರಾಯಣ ಶೆಟ್ಟಿ, ಎಚ್. ಸಿ.ಶಿವಕುಮಾರ್ ಇದ್ದರು.

**One Week**
**National Level Workshop on**
**Advances in Satellite Communication**
**& Networking**
**29.8.2018-2.9.2018**

ವಿಜಯ ಕರ್ನಾಟಕ ಶುಕ್ರವಾರ, 7 ಸೆಪ್ಟೆಂಬರ್ 2018

## 'ಹೊಸ ಉದ್ಯಮಕ್ಕೆ ಶಿವಮೊಗ್ಗ ಪೂರಕ'

▪ ವಿಕ ಸುದ್ದಿಲೋಕ ಶಿವಮೊಗ್ಗ

ಅಭಿವೃದ್ಧಿ ಮತ್ತು ಆಧುನಿಕತೆಯೊಂದಿಗೆ ಶಿವಮೊಗ್ಗ ನಗರ ಹೊಸ ಉದ್ಯಮ ಶೀಲತೆಯ ಕ್ರಿಯಾಶೀಲ ವೇದಿಕೆಯಾಗಿ ನಿಲ್ಲುತ್ತದೆ ಎಂದು ಉದ್ಯಮಿ ಡಿ.ಎಸ್.ಅರುಣ್ ಅಭಿಪ್ರಾಯಪಟ್ಟರು.

ನಗರದ ಜೆಎನ್‌ಎನ್‌ಸಿಇ ಕಾಲೇಜಿನ ಇನ್‌ಕ್ಯುಬೇಷನ್ ಸೆಂಟರ್ ಬುಧವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಹ್ಯಾಕತಾನ್ ಕಾರ್ಯಕ್ರಮದ ಸಮಾರೋಪದಲ್ಲಿ ಅವರು ಮಾತನಾಡಿ, ಇಂದಿನ ಯುವ ಸಮೂಹ ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಉತ್ಸುಕರಾಗಿದ್ದು, ಉದ್ಯಮ ಪ್ರಾರಂಭಿಸಿ ಯಶಸ್ಸು ಹೊಂದಲು ಶಿವಮೊಗ್ಗ ನಗರ ಪೂರಕವಾಗಿದೆ ಎಂದರು.

ಸಿಟಿ ಸ್ಕ್ಯಾನ್

ಯುವಕರು ಉದ್ಯೋಗ ಅರಸಿ ಬೇರೆ ಕಡೆಗಳಿಗೆ ಹೋಗುವ ಬದಲು ಶಿವಮೊಗ್ಗದಲ್ಲಿಯೇ ಯಶಸ್ಸು ಹುಡುಕುವ ಪ್ರಯತ್ನ ನಡೆಸಬೇಕಿದೆ. ಹೊಸ ಯೋಜನೆ ಮತ್ತು ಯೋಚನೆಗಳಿದ್ದರೆ ನಗರಗಳಲ್ಲೆ ಯಶಸ್ಸು ಪಡೆಯಲು ಸಾಧ್ಯವಿದೆ ಎಂದು ಸಲಹೆ ನೀಡಿದರು.

ಇನ್‌ಕ್ಯುಬೇಷನ್ ಸೆಂಟರ್‌ನ ವಲಯ ಸಂಯೋಜನಾಧಿಕಾರಿ ಮಲ್ಲೇಶ್‌ಕುಮಾರ್ ಮಾತನಾಡಿ, ಇನ್‌ಕ್ಯುಬೇಷನ್ ಸೆಂಟರ್‌ನಲ್ಲಿ ಬರುವ ವಿದ್ಯಾರ್ಥಿಗಳ ಹೊಸ ಆಲೋಚನೆಗಳು ಯೋಚನೆಗಳಾಗಿ ಉಳಿಯದೆ ಯೋಜನೆಗಳಾಗಿ ಮಾರುಕಟ್ಟೆಯಲ್ಲಿ ಅನುಷ್ಠಾನಗೊಳ್ಳಬೇಕಿದೆ. ಅನುಷ್ಠಾನಗೊಳಿಸಲು ಇನ್‌ಕ್ಯುಬೇಷನ್ ಸೆಂಟರ್ ಮೂಲಕ ಎಲ್ಲ ರೀತಿಯ ನೆರವು ನೀಡಲಾಗುವುದು. ಹ್ಯಾಕಾತಾನ್ ಕಾರ್ಯಕ್ರಮ ಉದ್ಯಮ ಶೀಲತೆಯ ಕಾರ್ಯ ಯೋಜನೆಯ ಪ್ರೇರಣಾ ಶಕ್ತಿಯಾಗಿ ನಿಂತಿದೆ ಎಂದರು.

ಜೆಎನ್‌ಎನ್‌ಸಿಇ ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಆರ್.ಮಹದೇವಸ್ವಾಮಿ, ಇನ್‌ಕ್ಯುಬೇಷನ್ ಸೆಂಟರ್‌ನ ಕಾಲೇಜು ಸಂಯೋಜನಾಧಿಕಾರಿ ಡಾ.ಪಿ.ಮಂಜುನಾಥ್, ಗ್ರೀನ್‌ಬಬಲ್ಸ್ ಸ್ಟಾರ್ಟ್ ಅಪ್‌ನ ಸಹ ಸಂಸ್ಥಾಪಕ ದೀರ್ ಲಲಿತ್ ಗುಪ್ತ, ಎಕ್ಸ್‌ಚೇಂಜಿಂಗ್ ಕಂಪನಿಯ ಮುಖ್ಯಸ್ಥ ರಶ್ಮಿ ಸೂರ್ಯನಾರಾಯಣ, ಎಸ್.ಪಿ.ಕಿರಣ್, ನವ್ ಕೃಷ್ಣ ಮತ್ತಿತರರು ಇದ್ದರು.



ಶಿವಮೊಗ್ಗದ ಜೆಎನ್‌ಎನ್‌ಸಿಇ ಕಾಲೇಜಿನ ಇನ್‌ಕ್ಯುಬೇಷನ್ ಸೆಂಟರ್ ಬುಧವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಹ್ಯಾಕತಾನ್ ಕಾರ್ಯಕ್ರಮದ ಸಮಾರೋಪದಲ್ಲಿ ಉದ್ಯಮಿ ಡಿ.ಎಸ್.ಅರುಣ್ ಮಾತನಾಡಿದರು.

ಜನ ಹೋರಾಟ

ಬುಧವಾರ 05, ಸೆಪ್ಟಂಬರ್ 2018

## ಜೆಎನ್ ಎನ್ ಸಿಯಲ್ಲಿ ರಾಜ್ಯಮಟ್ಟದ ಹ್ಯಾಕತಾನ್ -2018



ಶಿವಮೊಗ್ಗ ನಗರದ ಜೆ.ಎನ್. ಎನ್.ಸಿ ಇಂಜಿನಿಯರಿಂಗ್ ಕಾಲೇಜಿನ ನ್ಯೂ ಏಜ್ ಇನ್ಕ್ಯುಬೇಷನ್ ಸೆಂಟರ್ ವತಿಯಿಂದ ಸೆ. 4 ಮತ್ತು 5 ರಂದು ಜೆ.ಎನ್.ಎನ್.ಸಿ.ಇ ಕಾಲೇಜಿನ ಎಂ.ಸಿ.ಎ/ಎಂ.ಬಿ.ಎ ಸಭಾಂಗಣದಲ್ಲಿ ಎರಡು ದಿನಗಳ ಕಾಲ ರಾಜ್ಯಮಟ್ಟದ ಹ್ಯಾಕತಾನ್-2018 ಕಾರ್ಯಕ್ರಮ ಏರ್ಪಡಿಸಲಾಗಿತ್ತು

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಅವರು ನೆರವೇರಿಸಲಿದ್ದು, ಸಂಪನ್ಮೂಲ ವ್ಯಕ್ತಿಗಳಾಗಿ ಗ್ರೀನ್ ಬಬಲ್ಸ್ ಸ್ಟಾರ್ಟ್ ಅಪ್‌ನ ಸಹ ಸಂಸ್ಥಾಪಕರಾದ ದೀರ್ ಲಲಿತ್ ಗುಪ್ತ ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಶಿಕ್ಷಣ ಸಮಿತಿಯ ಉಪಾಧ್ಯಕ್ಷರಾದ ಟಿ.ಆರ್. ಅಶ್ವತ್ ನಾರಾಯಣ್ ಶೆಟ್ಟಿ ಕಾರ್ಯದರ್ಶಿ ಎಸ್.ಎನ್. ನಾಗರಾಜ್, ಜೆ.ಎನ್.ಎನ್.ಸಿ.ಇ ಕಾಲೇಜಿನ ಉಪ ಪ್ರಾಂಶುಪಾಲರಾದ ಎಲ್.ಕೆ.ಶ್ರೀಪತಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಜೆ.ಎನ್.ಎನ್.ಸಿ.ಇ ಕಾಲೇಜಿನ ಪ್ರಾಂಶುಪಾಲರಾದ ಡಾ|| ಹೆಚ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ನ್ಯೂ ಏಜ್ ಇನ್ಕ್ಯುಬೇಷನ್ ಸೆಂಟರ್‌ನ ಕಾಲೇಜು ಸಂಯೋಜನಾಧಿಕಾರಿ ಡಾ|| ಮಂಜುನಾಥ್.ಪಿ, ವಲಯ ಸಂಯೋಜನಾಧಿಕಾರಿ ಮಲ್ಲೇಶ್ ಕುಮಾರ್ ಮತ್ತಿತ್ತರರು ಉಪಸ್ಥಿತರಿದ್ದರು.

ಸೆ.5 ರಂದು ಸಂಜೆ 4:00 ಘಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು ಛೇಂಬರ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷರಾದ ಡಿ.ಎಸ್.ಅರುಣ್ ಸಮಾರೋಪ ನುಡಿಗಳನ್ನಾಡಲಿದ್ದು, ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಎ.ಎಸ್.ವಿಶ್ವನಾಥ್, ಖಜಾಂಚಿಗಳಾದ ಸಿ.ಆರ್.ನಾಗರಾಜ್, ರಾಷ್ಟ್ರೀಯ ಶಿಕ್ಷಣ ಸಮಿತಿಯ ಕುಲಸಚಿವರಾದ ಹೂವಯ್ಯ ಗೌಡ, ಜೆ.ಎನ್.ಎನ್.ಸಿ.ಇ ಕಾಲೇಜಿನ ಉಪ ಪ್ರಾಂಶುಪಾಲರಾದ ಎಲ್.ಕೆ.ಶ್ರೀಪತಿ ಅವರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಜೆ.ಎನ್.ಎನ್.ಸಿ.ಇ ಕಾಲೇಜಿನ ಪ್ರಾಂಶುಪಾಲರಾದ ಡಾ|| ಹೆಚ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಎರಡು ಹಗಲು, ಒಂದು ರಾತ್ರಿ ನಡೆಯುವ ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದು ವಿವಿಧ ಕ್ಷೇತ್ರದ ನುರಿತ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆಎಂದು ಇನ್ಕ್ಯುಬೇಷನ್ ಸೆಂಟರ್‌ನ ವಲಯ ಸಂಯೋಜನಾಧಿಕಾರಿ ಮಲ್ಲೇಶ್ ಕುಮಾರ್ ತಿಳಿಸಿದ್ದಾರೆ.

**State Level Hackathon Competition 4.9.2018 & 5.9.2018**

ವಿಜಯ ಕರ್ನಾಟಕ ಶನಿವಾರ, 8 ಸೆಪ್ಟೆಂಬರ್ 2018

## ನ್ಯಾನೊ ಕ್ಷೇತ್ರದಲ್ಲಿ ಬೆಟ್ಟದಷ್ಟು ಅವಕಾಶ

### ಜೆಎನ್‌ಎನ್‌ಸಿಯಲ್ಲಿ ಎರಡು ದಿನಗಳ ಕಾರ್ಯಾಗಾರ

- ರಾಜ್ಯದ ಹಲವೆಡೆಯಿಂದ 140 ಶಿಬಿರಾರ್ಥಿ ಭಾಗಿ
- ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ
- ಹೊಸ ಆಯಾಮ ತೆರೆದುಕೊಳ್ಳಲು ಕಾರ್ಯಾಗಾರ ಪೂರಕ

▪ ವಿಕ ಸುದ್ದಿಲೋಕ ಶಿವಮೊಗ್ಗ

'ನ್ಯಾನೊ ತಂತ್ರಜ್ಞಾನ' ಇತ್ತೀಚಿನದ್ದೆನಿಸಿದರೂ ಸಾಕಷ್ಟು ಹಳೆಯದ್ದಾಗಿದೆ. ಆದರೆ, ಅದರೆಡೆಗೆ ಅಧ್ಯಯನದ ಆಯಾಮ ಮತ್ತು ಅವಕಾಶಗಳು ಹೆಚ್ಚಿವೆ ಎಂದು ಸೆಂಟರ್ ಫಾರ್ ನ್ಯಾನೊ ಸೈನ್ಸ್ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್ ಕೇಂದ್ರದ ನಿರ್ದೇಶಕ ಗಿರಿಧರ್ ಯು.ಕುಲಕರ್ಣಿ ಹೇಳಿದರು.

ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಜವಾಹರಲಾಲ್ ನೆಹರೂ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ, ಎಂಸಿಎ ಸಭಾಂಗಣದಲ್ಲಿ ಶುಕ್ರವಾರ ನಡೆದ ಎರಡು ದಿನಗಳ 'ನ್ಯಾನೊ ಸೈನ್ಸ್ ಮತ್ತು ನ್ಯಾನೊ ಟೆಕ್ನಾಲಜಿ' ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ದೊಡ್ಡ ಸುದ್ದಿ

'ನ್ಯಾನೊ ವಿಜ್ಞಾನ ಮತ್ತು ನ್ಯಾನೊ ತಂತ್ರಜ್ಞಾನ ಉದಯೋನ್ಮುಖಿ ಪ್ರವೃತ್ತಿಗಳು' ವಿಷಯ ಕುರಿತು ಮಾತನಾಡಿದ ಅವರು, 1883ರ ಅವಧಿಯಲ್ಲಿ ಇದರ ಬಗ್ಗೆ ಹಲವು ಸಂಶೋಧನೆಗಳು ನಡೆದಿವೆ. ಪರಿಕಲ್ಪನೆ ಹಳೆಯದ್ದಾದರೂ ಈಗ ಹೊಸ ಚಿಗುರುಗಳು ಆವಿಷ್ಕಾರ ರೂಪದಲ್ಲಿ ಟಿಸಿಲೊಡೆಯುತ್ತಿವೆ. ಇದೊಂದು 'ಬಿಹೇವಿಯರಲ್ ಸೈನ್ಸ್' ಆಗಿದ್ದು, ಸಂದರ್ಭಕ್ಕೆ ಅನುಗುಣವಾಗಿ ಅಧ್ಯಯನ ಮಾಡಬೇಕಾಗುತ್ತದೆ. 'ನ್ಯಾನೊ' ಕುರಿತ ಜ್ಞಾನಾರ್ಜನೆಗಾಗಿ ಕಾರ್ಯಾಗಾರ, ವಿಚಾರ ಸಂಕಿರಣದಂತಹ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ವಿಜ್ಞಾನಿ ಸಿ.ಎನ್.ಆರ್.ರಾವ್. ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾಗಿದ್ದ ಅವಧಿಯಲ್ಲಿ ಇದರೆಡೆಗೆ ಹೆಚ್ಚಿನ ಒತ್ತು ನೀಡಿದ್ದರು ಎಂದು ತಿಳಿಸಿದರು.

**ಔಷಧ ಕ್ಷೇತ್ರದಲ್ಲಿ 'ನ್ಯಾನೊ' ಬಳಕೆ:** ಕ್ಯಾನ್ಸರ್‌ನಂತಹ ರೋಗಗಳ ಚಿಕಿತ್ಸೆಗೂ ನ್ಯಾನೊ ಬಳಸಲಾಗುತ್ತಿದೆ. ವೈದ್ಯಶಾಸ್ತ್ರದಲ್ಲೂ ನ್ಯಾನೊ ತಂತ್ರಜ್ಞಾನ ಪ್ರಭಾವಿಯಾಗಿ ಬಳಸಲಾಗುತ್ತಿದೆ. ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಮೇಲೆ ನ್ಯಾನೊ ಔಷಧೋಪಚಾರವನ್ನು ಬಳಸಿ ಬಹಳಷ್ಟು ಯಶಸ್ಸು ಮಾಡಲಾಗುತ್ತಿದೆ. ಕೃಷಿ ಕ್ಷೇತ್ರ ಕೂಡ ಇದರಿಂದ ಹೊರತಾಗಿಲ್ಲ, ಮುಂದುವರಿದ ಆವಿಷ್ಕಾರಗಳೂ ಇದರಡಿ ನಡೆಯುತ್ತಿವೆ ಎಂದು ತಿಳಿಸಿದರು.

ನ್ಯಾನೊ ತಂತ್ರಜ್ಞಾನದ ಬಗ್ಗೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳಿವೆ. ಭವಿಷ್ಯ ಕೂಡ ಉಜ್ವಲವಾಗಿದೆ. ಭಾರತದಂತಹ ಪ್ರಗತಿಶೀಲ ದೇಶದಲ್ಲಿ ಔಷಧ, ಕೃಷಿ ಸೇರಿ ನವೀನ ಕ್ಷೇತ್ರಗಳಲ್ಲಿ ಅತ್ಯುತ್ಕೃಷ್ಟ ಆವಿಷ್ಕಾರಗಳು ನಡೆಯಬೇಕಿದೆ. ಸಂಶೋಧನಾರ್ಥಿಗಳೂ ಇದರೆಡೆಗೆ ಹೆಚ್ಚಿನ ಒತ್ತು ನೀಡಬೇಕು. ಸಾಮಾಜಿಕ ಬದ್ಧತೆಯೊಂದಿಗೆ ನಮ್ಮ ಅಗತ್ಯತೆಗಳಿಗೆ ಸ್ಪಂದಿಸಬಹುದಾದ ಸಂಶೋಧನೆಗಳನ್ನು ಮಾಡಬೇಕು. ಇದೇ ನಾವು ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಸಮಾಜಕ್ಕೆ ನೀಡಬಹುದಾದ ಕೊಡುಗೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಎನ್‌ಇಎಸ್ ಉಪಾಧ್ಯಕ್ಷ ಟಿ.ಆರ್. ಅಶ್ವತ್ಥನಾರಾಯಣಶೆಟ್ಟಿ ಮಾತನಾಡಿ, ನ್ಯಾನೊ ಕ್ಷೇತ್ರ ಹಳೆಯ ಹೆದ್ದಾರಿಯಂತಿದ್ದು, ಈಗ ನಡೆಯುತ್ತಿರುವ ಸಂಶೋಧನೆಗಳು ಆ ಹೈವೇಗೆ ಸಂಪರ್ಕ ಕಲ್ಪಿಸುವ ದಾರಿಗಳಾಗಿವೆ. ವಿದ್ಯಾರ್ಥಿಗಳಲ್ಲಿ ಆವಿಷ್ಕಾರದೆಡೆಗೆ ಮುನ್ನುಗ್ಗಲು ಕಿಚ್ಚು ಹಚ್ಚುವ ಕೆಲಸ ಇಂತಹ ಕಾರ್ಯಾಗಾರದ ಮೂಲಕ ನಡೆಯಲಿ ಎಂದು ಆಶಯ ವ್ಯಕ್ತಪಡಿಸಿದರು.

ಎನ್‌ಇಎಸ್ ಕಾರ್ಯದರ್ಶಿ ಎಸ್.ಎನ್. ನಾಗರಾಜ್, ಅಧ್ಯಕ್ಷ ಎ.ಎಸ್.ವಿಶ್ವನಾಥ್, ಜೆಎನ್‌ಎನ್‌ಸಿಇ ಉಪ ಪ್ರಾಂಶುಪಾಲ ಡಾ.ಎಲ್.ಕೆ. ಶ್ರೀಪತಿ, ಡಾ. ಎಚ್.ಜಿ. ರಾಜಪ್ರಕಾಶ್, ಪ್ರೊ.ಆರ್. ಕೆ. ಬಳಿಗ ಇತರರಿದ್ದರು.



ಜವಾಹರಲಾಲ್ ನೆಹರೂ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ, ಎಂಸಿಎ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಾಗಾರಕ್ಕೆ ಸೆಂಟರ್ ಫಾರ್ ನ್ಯಾನೊ ಸೈನ್ಸ್ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್ ಕೇಂದ್ರದ ನಿರ್ದೇಶಕ ಗಿರಿಧರ್ ಯು.ಕುಲಕರ್ಣಿ ಚಾಲನೆ ನೀಡಿದರು. ಎನ್‌ಇಎಸ್‌ನ ಪದಾಧಿಕಾರಿಗಳಾದ ಎ.ಎಸ್.ವಿಶ್ವನಾಥ್, ಅಶ್ವತ್ಥನಾರಾಯಣ ಶೆಟ್ಟಿ ಇತರರು ಇದ್ದರು.

ನ್ಯಾನೊ ಟೆಕ್ನಾಲಜಿಯಲ್ಲಿ ಸಂಶೋಧನೆಗೆ ಸಾಕಷ್ಟು ಅವಕಾಶಗಳಿವೆ. ಆದರೆ, ಯಾವ ಮಾರ್ಗದಲ್ಲಿ ನಡೆಬೇಕು ಎಂಬ ಅಂಶಗಳ ಬಗ್ಗೆ ಕಾರ್ಯಾಗಾರ ಮಾರ್ಗದರ್ಶಿಯಾಗಲಿದ್ದು, ಪ್ರತಿಯೊಬ್ಬರೂ ಇದರ ಸದುಪಯೋಗ ಪಡಿಸಿಕೊಳ್ಳಬೇಕು.
– ಡಾ.ಎಚ್.ಆರ್.ಮಹಾದೇವಸ್ವಾಮಿ, ಪ್ರಾಂಶುಪಾಲ, ಜೆಎನ್‌ಎನ್‌ಸಿಇ

DECCAN HERALD

Saturday, September 8, 2018



Bengaluru-based Centre for Nano and Soft Matter Sciences Director Giridhar U Kulkarni inaugurates two-day workshop on 'Emerging Trends in Nano Science and Nano Technology' in Shivamogga on Friday. DH PHOTO

## 'Improve knowledge of Nano science'

SHIVAMOGGA, DHNS: Bengaluru-based Centre for Nano and Soft Matter Sciences Director Giridhar U Kulkarni opined that Nano is a behavioural science which converges all disciplines of Science into a single one.

Inaugurating the two-day workshop on 'Emerging Trends in Nano Science and Nano Technology' organised by Department of Physics at MBA/MCA hall, JNNCE campus, here on Friday, he said Nano science plays an important role in medical, agricultural and technological applications. He suggested students to take this opportunity to enhance their knowledge in Nano field. This is need of the hour, he added.

Earlier speaking on the occasion, JNNCE Principal H R Mahadevaswamy stated that this workshop is a platform to all researchers, students, and faculties to interact with the scientific community to discuss their research ideas. It also provides an opportunity to highlight recent developments and to discuss future directions on these exciting fields.

JNNCE Vice-principal L K Sreepathi, National Education Society office-bearers A S Vishwanatha, S N Nagaraja, T R Ashwatha Narayana Setty, H C Shivakumar were present.

Five eminent scientists from Centre for Nano Science and soft matter Science, Indian Institute of Science, and JNCASR will deliver talks in this workshop.

**Two days Science Academies Lecture Workshop on**
**Emerging Trends in Nano Science & Nano Technology - 7th & 8th September 2018**


ವಿಜಯವಾಣಿ

ಶುಕ್ರವಾರ 28 ಸೆಪ್ಟೆಂಬರ್ 2018

## ಇಂಜಿನಿಯರ್ ಕೊಡುಗೆ ಅಪಾರ

ವಿಚಾರ ಸಂಕಿರಣದಲ್ಲಿ ಪ್ರೊ. ಲಕ್ಷ್ಮಣ್ ಹೇಳಿಕೆ


ಸಂಯುಕ್ತ ಕರ್ನಾಟಕ 28 ಸೆಪ್ಟೆಂಬರ್, 2018, ಶುಕ್ರವಾರ

## ಶಿವಮೊಗ್ಗ ಅಭಿವೃದ್ಧಿಗೆ ಇಂಜಿನಿಯರ್‌ಗಳ ಕೊಡುಗೆ ಅಪಾರ

**International Conference on Emerging & Sustainable Trends in Civil Engineering**
**27th -28th, September, 2018**


ಸಂಯುಕ್ತ ಕರ್ನಾಟಕ

ಶನಿವಾರ, 06, ಅಕ್ಟೋಬರ್, 2018,

## ದ್ವಂದ್ವದಿಂದ ಹೊರಬಂದು ಉದ್ಯಮದಲ್ಲಿ ಯಶಸ್ಸು ಗಳಿಸಿ


ಹೊಸ ದಿಗಂತ ಬುಧವಾರ, 26 ಸೆಪ್ಟೆಂಬರ್ 2018

## ಜೆಎನ್‌ಎನ್‌ಸಿಇನಲ್ಲಿ ಎರಡು ದಿನ ಅಂತಾರಾಷ್ಟ್ರೀಯ ವಿಚಾರ ಸಂಕಿರಣ

**Entrepreneurship Awareness Camp Sponsored by EDII, DST – NIMAT Project 2018-19**
**4-6, October 2018**


ಪ್ರಜಾವಾಣಿ

ಶುಕ್ರವಾರ ಅಕ್ಟೋಬರ್ 12, 2018

## 'ವಾಸ್ತವದ ಚಿತ್ರಗಳು ಪರಿಣಾಮಕಾರಿ'


ಹೊಸ ದಿಗಂತ

ಶುಕ್ರವಾರ, 12 ಅಕ್ಟೋಬರ್ 2018

ಡಾ. ಎಚ್. ಎಸ್. ವೆಂಕಟೇಶಮೂರ್ತಿ ಪ್ರತಿಪಾದನೆ

## ಸುಳ್ಳುಗಳನ್ನು ಸೃಷ್ಟಿಸುವುದು ಸಿನಿಮಾ ಕೆಲಸವಾಗಬಾರದು

**Inauguration of Aswadana - 11.10.2019**

ಸಂಯುಕ್ತ ಕರ್ನಾಟಕ
15 ಅಕ್ಟೋಬರ್, 2018,
ಸೋಮವಾರ

## ವೃತ್ತಿಯಲ್ಲಿ ಯಶಸ್ಸು ಸಾಧಿಸಲು ಕೌಶಲ್ಯಾಧಾರಿತ ಶಿಕ್ಷಣ ಅಗತ್ಯ



ಶಿವಮೊಗ್ಗದ ಜೆಎನ್‌ಎನ್ ಇಂಜಿನಿಯರಿಂಗ್ ಕಾಲೇಜಿನ ಎಂಬಿಎ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಾಗಾರವನ್ನು, ಕಾಲೇಜಿನ ಪ್ರಾಂಶುಪಾಲ ಡಾ. ಮಹಾದೇವ ಸ್ವಾಮಿ ಉದ್ಘಾಟಿಸಿದರು.

ಸಂ.ಕ. ಸಮಾಚಾರ ಶಿವಮೊಗ್ಗ

ಇಂದಿನ ತಾಂತ್ರಿಕ ಯುಗದಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಅರ್ಹತೆಯೊಂದಿಗೆ ಕೌಶಲ್ಯ ಮೈಗೂಡಿಸಿಕೊಳ್ಳಬೇಕು. ಆಗ ವೃತ್ತಿಪರತೆಯಲ್ಲಿ ಯಶಸ್ಸು ಸಾಧಿಸಲು ಸಾಧ್ಯ. ಆದರೆ ಇಂದಿನ ಶೈಕ್ಷಣಿಕ ವ್ಯವಸ್ಥೆ ಇದಕ್ಕೆ ಪೂರಕವಾಗಿಲ್ಲ. ಈ ಕಾರಣಕ್ಕಾಗಿಯೇ ಕೌಶಲ್ಯಾಭಿವೃದ್ಧಿ ಸಂಸ್ಥೆಗಳಿಗೆ ಸಾಕಷ್ಟು ಬೇಡಿಕೆ ಇದೆ ಎಂದು ಜೆಎನ್‌ಎನ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಮಹಾದೇವ ಸ್ವಾಮಿ ಹೇಳಿದರು.

ಇಲ್ಲಿನ ಜೆಎನ್‌ಎನ್ ಇಂಜಿನಿಯರಿಂಗ್ ಕಾಲೇಜಿನ ಎಂಬಿಎ ಸಭಾಂಗಣದಲ್ಲಿ ರೋಟರಿ ಪೂರ್ವ, ಉತ್ತರ ಮತ್ತು ಜುಬಿಲಿ ಹಾಗೂ ಲರ್ನ್ ಟು ಲೀವ್ ಸಂಸ್ಥೆಯ ಸಹಯೋಗದಲ್ಲಿ ತಾಂತ್ರಿಕ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ವೃತ್ತಿಪರ ಮಾರ್ಗದರ್ಶನ ಮತ್ತು ಔದ್ಯೋಗಿಕ ಯಶಸ್ಸಿನ ಮಾರ್ಗಗಳು ಎಂಬ ಶೀರ್ಷಿಕೆಯಡಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಪರೀಕ್ಷೆಗಾಗಿ ನಡೆಸುವ ಅಧ್ಯಯನದಿಂದ ಜ್ಞಾನವನ್ನು ಸಂಪಾದಿಸಬಹುದೇ ಹೊರತು ಕೌಶಲ್ಯವನ್ನಲ್ಲ. ವೃತ್ತಿಯಲ್ಲಿ ಯಶಸ್ಸು ಸಾಧಿಸಲು ಜ್ಞಾನವಷ್ಟೇ ಸಾಲದು. ಇದರೊಂದಿಗೆ ಕೌಶಲ್ಯ ಕೂಡ ಅಗತ್ಯ. ಈ ಕಾರಣಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೌಶಲ್ಯ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದು, ಮುಂಬರುವ 2-3 ವರ್ಷಗಳಲ್ಲಿ ಸುಮಾರು 20ಲಕ್ಷ ಕೌಶಲ್ಯಾಧಾರಿತ ವ್ಯಕ್ತಿಗಳನ್ನು ರೂಪಿಸುವ ಗುರಿ ಹೊಂದಲಾಗಿದೆ. ಈ ನಿಟ್ಟಿನಲ್ಲಿ ರೋಟರಿ ಸಂಸ್ಥೆ ಕೂಡ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ವಿದ್ಯಾಭ್ಯಾಸ ಪೂರ್ಣಗೊಳಿಸಿದ ಬಳಿಕ ಸಂಬಳಕ್ಕಾಗಿ ಕೆಲಸ ಮಾಡಲು ಸೀಮಿತರಾಗಬಾರದು. ನಮ್ಮಲ್ಲಿರುವ ಕೌಶಲ್ಯವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಿಕೊಳ್ಳಬೇಕು. ಮನಸ್ಸಿದ್ದರೆ ಮಾರ್ಗವಿದೆ. ಕೌಶಲ್ಯ ಒಂದು ಮುಖವಾದರೆ ಇಚ್ಛಾಶಕ್ತಿ ಮತ್ತೊಂದು ಮುಖ. ಆದ್ದರಿಂದ ಇಚ್ಛಾಶಕ್ತಿಯೊಂದಿಗೆ ನಿರಂತರವಾಗಿ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಮಾತನಾಡುವ ಕಲೆಯನ್ನು ಬೆಳಸಿಕೊಳ್ಳಬೇಕು. ದಿನಕ್ಕೆ ಕನಿಷ್ಟ 15 ನಿಮಿಷ ದಿನಪತ್ರಿಕೆ ಓದಬೇಕು ಹಾಗೂ 10 ನಿಮಿಷ ಟಿವಿಯಲ್ಲಿ ಪ್ರಸಾರವಾಗುವ ಚರ್ಚೆಗಳನ್ನು ನೋಡಬೇಕು ಎಂದರು.

ದಿನಕರ್ ನ್ಯಾಷನಲ್ ಡಿಪ್ಲೋಮ ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಶೇಖರ್, ರೋಟರಿ ಕ್ಲಬ್‌ನ ಅಸಿಸ್ಟೆಂಟ್ ಗೌರ್ವನರ್ ರೋ.ರವೀಂದ್ರನಾಥ್ ಐತಾಳ್, ರೋಟರಿ ಪೂರ್ವದ ಅಧ್ಯಕ್ಷ ಮಹೇಶ್ ಆಲೆಮನೆ, ರೋಟರಿ ಜ್ಯೂಬಿಲಿ ಅಧ್ಯಕ್ಷ ಓಂ ಗಣೇಶ್, ರೋಟರಿ ಉತ್ತರದ ಅಧ್ಯಕ್ಷ ರೋ.ಶಿವಮೂರ್ತಿ, ಲರ್ನ್ ಟು ಲೀವ್ ಸಂಸ್ಥೆಯ ಮುಖ್ಯಸ್ಥ ಚಿದಂಬರ ವಿಷ್ಣು ಜೋಷಿ, ಡಾ.ಪರಮೇಶ್ವರ್ ಶಿಗ್ಗಾವ್, ವಸಂತ ಹೊಬ್ಬಿದಾರ್, ವಿಜಯಕುಮಾರ್, ಅಶ್ವತ್ ಮತ್ತಿತರರಿದ್ದರು.

**Career Guidance Program - 14.10.2018**



ಶಿವಮೊಗ್ಗದ ಜೆಎನ್‌ಸಿಇ ಕಾಲೇಜಿನ ಎಂಬಿಎ ವಿಭಾಗವು ಇತ್ತೀಚೆಗೆ ಏರ್ಪಡಿಸಿದ್ದ ವಿದ್ಯಾರ್ಥಿಗಳ ಉನ್ನತೀಕರಣ ಸಮಾರೋಪದಲ್ಲಿ ಮೈಸೂರಿನ ಎಸ್‌ಐಎಂ, ಐಎಂಟಿಯ ಗ್ರಂಥಪಾಲಕ ಡಾ.ಎಂ.ಬಿ.ಸುನಿಲ್ ಮಾತನಾಡಿದರು. ಎನ್‌ಇಎಸ್ ಅಧ್ಯಕ್ಷ ನಾರಾಯಣ ಶೆಟ್ಟಿ, ಡಾ.ಎಲ್.ಕೆ.ಶ್ರೀಪತಿ, ಡಾ.ಪಿ.ಎಸ್. ಸುಭದ್ರ, ಡಾ.ವಿಕ್ರಂ ಇದ್ದರು.

**A Three day Student Development Programme on**
**Research Methodology for PG & PHD Scholars in Commerce & Management**
**25th - 27th October 2018**

ವಿಜಯವಾಣಿ
ಮಂಗಳವಾರ 13 ನವೆಂಬರ್ 2018

## ಹೊಸ ಆಲೋಚನೆ ಮೂಲಕ ಕೈಗಾರಿಕೆ ಸ್ಥಾಪನೆಯಾಗಲಿ

### ಉದ್ಯಮ ಸ್ಥಾಪನೆ ವೇಳೆ ಎದುರಾಗುತ್ತವೆ ಹಲವು ಸವಾಲು | ಉದ್ಯಮಿ ಸಿ.ವಿ.ರಘು ಮಾಹಿತಿ

■ ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ

ಯುವ ಜನತೆ ಉದ್ಯೋಗಕ್ಕಾಗಿ ಅರಸದೆ ಹೊಸ ಆಲೋಚನೆ ಹಾಗೂ ಆವಿಷ್ಕಾರಗಳ ಮೂಲಕ ಉದ್ಯಮ, ಕೈಗಾರಿಕೆಗಳ ಸ್ಥಾಪನೆಗೆ ಮುಂದಾಗಬೇಕು ಎಂದು ಉದ್ಯಮಿ ಸಿ.ವಿ.ರಘು ಹೇಳಿದರು.

ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಐಇಟಿಇ ವಿಭಾಗ ಆಯೋಜಿಸಿದ್ದ ಅಂತರ ಕಾಲೇಜು ತಾಂತ್ರಿಕ ಉತ್ಸವ -ಪ್ಲಾಸ್ಮಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉದ್ಯಮ ಸ್ಥಾಪನೆ ಆರಂಭದಲ್ಲಿ ಅನೇಕ ಸವಾಲುಗಳು ಎದುರಾಗುತ್ತವೆ. ಎಲ್ಲ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವುದನ್ನು ಕಲಿತುಕೊಳ್ಳಬೇಕು. ಆಸಕ್ತ ಕ್ಷೇತ್ರದಲ್ಲಿ ಪರಿಣತಿ ಹೊಂದುವ ಮೂಲಕ ಉತ್ತಮ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಶಿಕ್ಷಣ ಮಾಧ್ಯಮ ಕೇವಲ ವಿಷಯಗಳ ಜ್ಞಾನ ಹಾಗೂ ತಿಳಿವಳಿಕೆಗೆ ಉಪಯುಕ್ತ ಆಗುತ್ತದೆ. ಉದ್ಯಮ ಕ್ಷೇತ್ರದಲ್ಲಿ ಹೆಚ್ಚಿನ ಕೌಶಲದ ಅವಶ್ಯಕತೆ ಇದೆ. ತಂತ್ರಜ್ಞಾನ ಹಾಗೂ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯಿಂದ ಉದ್ಯಮ ಕ್ಷೇತ್ರಕ್ಕೆ ಕಾಲಿಡಲು ಯುವ ಜನತೆ ಮುಂದಾಗಬೇಕು ಎಂದರು. ಎನ್‌ಇಎಸ್ ಉಪಾಧ್ಯಕ್ಷ ಅಶ್ವತ್ಥನಾರಾಯಣ ಶೆಟ್ಟಿ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ನಿರಂತರವಾಗಿ ನಡೆಯುತ್ತಿದೆ. ತಂತ್ರಜ್ಞಾನ ಬಳಕೆಯಿಂದ ಆಗುವ ಹೊಸ ಆವಿಷ್ಕಾರಗಳ ಬಗ್ಗೆ




ಅಂತರ ಕಾಲೇಜು ತಾಂತ್ರಿಕ ಉತ್ಸವ -ಪ್ಲಾಸ್ಮಾ ಕಾರ್ಯಕ್ರಮದಲ್ಲಿ ಅಶ್ವತ್ಥನಾರಾಯಣ ಶೆಟ್ಟಿ ಮಾತನಾಡಿದರು.

ವಿದ್ಯಾರ್ಥಿಗಳು ಕ್ರಿಯಾತ್ಮಕವಾಗಿ ಆಲೋಚಿಸಬೇಕು. ಸಮಾಜಕ್ಕೆ ವಿಶೇಷ ಕೊಡುಗೆ ನೀಡಲು ಮುಂದಾಗಬೇಕು ಎಂದು ಹೇಳಿದರು.

ಇಸಿ ವಿಭಾಗದ ಎಚ್‌ಒಡಿ ಡಾ. ಪಿ.ಮಂಜುನಾಥ್ ಮಾತನಾಡಿ, ಪ್ರಸ್ತುತ ತಂತ್ರಜ್ಞಾನದ ಬಳಕೆ ಮಾಡಿಕೊಂಡು ಸಿದ್ಧಪಡಿಸುವ ನೂತನ ಆವಿಷ್ಕಾರ ಹಾಗೂ ಆಲೋಚನೆಗಳಿಗೆ ವೇದಿಕೆ ಕಲ್ಪಿಸಲು 'ಪ್ಲಾಸ್ಮಾ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾಲೇಜಿನ ಹಳೆ ವಿದ್ಯಾರ್ಥಿ ವಿಕಾಸ್ ರೂಪಿಸಿದ ಜನರಲ್ ಡೆವಲಪ್‌ಮೆಂಟ್ ಬೋರ್ಡ್ ಬಿಡುಗಡೆ ಮಾಡಲಾಯಿತು. ಜೆಎನ್‌ಎನ್‌ಸಿಇ ಪ್ರಾಚಾರ್ಯ ಡಾ. ಎಚ್.ಆರ್.ಮಹಾದೇವಸ್ವಾಮಿ, ಶರತ್, ಎನ್‌ಇಎಸ್‌ನ ಸಿ.ಆರ್.ನಾಗರಾಜ್, ಸತ್ಯನಾರಾಯಣ್, ಎಲ್.ಕೆ.ಶ್ರೀಪತಿ, ಸಹಾಯಕ ಪ್ರಾಧ್ಯಾಪಕ ಎಸ್.ಎಂ.ಶರತ್, ಉಜ್ವಲಾ ಇದ್ದರು.

> ಜಿಲ್ಲೆಯಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಅನೇಕ ಅವಕಾಶಗಳಿವೆ. ನವ ಉದ್ಯಮಿಗಳಿಗೆ ಉತ್ತಮ ಮಾರುಕಟ್ಟೆ ಸೃಷ್ಟಿಸಿಕೊಳ್ಳುವ ಅವಕಾಶ ಜಿಲ್ಲೆಯಲ್ಲಿದೆ. ಈ ಬಗ್ಗೆ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹೆಚ್ಚಿನ ಗಮನ ವಹಿಸಬೇಕು. ಆಸಕ್ತಿಯಿಂದ ಕೆಲಸ ಮಾಡಬೇಕು.
>
> | ಸಿ.ವಿ.ರಘು ಉದ್ಯಮಿ

ಪ್ರಜಾವಾಣಿ ಬುಧವಾರ • ನವೆಂಬರ್ 14, 2018

## 'ನೂತನ ತಂತ್ರಜ್ಞಾನ ಬಳಕೆ ಅನಿವಾರ್ಯ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೈಗಾರಿಕೆಗಳನ್ನು ಸ್ಥಾಪಿಸುವಾಗ ನೂತನ ತಂತ್ರಜ್ಞಾನ ಬಳಸಿಕೊಳ್ಳಬೇಕು ಎಂದು ಹೀರೊ ಮೋಟರ್ಸ್ ಪ್ರಧಾನ ವ್ಯವಸ್ಥಾಪಕ ಸಿ.ವಿ. ರಘು ಸಲಹೆ ನೀಡಿದರು.

ಜೆಎನ್‌ಎನ್ ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಅಂತರಕಾಲೇಜು ತಾಂತ್ರಿಕ ಉತ್ಸವ -ಪ್ಲಾಸ್ಮಾ 2018ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಉದ್ಯೋಗ ಹುಡುಕುವುದಕ್ಕಿಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವತ್ತ ಗಮನಹರಿಸಬೇಕು. ಮೆಕ್ಯಾನಿಕಲ್ ಎಂಜಿನಿಯರಿಂಗ್‌ಗೆ ಸಂಬಂಧಿಸಿದ ಕೈಗಾರಿಕೆಗಳು, ಕಂಪ್ಯೂಟರ್ ತಂತ್ರಜ್ಞಾನದ ಕೈಗಾರಿಕೆಗಳಿಗೆ ಜಿಲ್ಲೆಯಲ್ಲಿ ವಿಪುಲ ಅವಕಾಶಗಳಿವೆ. ಈ ಬಗ್ಗೆ ಆಸಕ್ತಿ ವಹಿಸಬೇಕು ಎಂದು ಹೇಳಿದರು.

ಎನ್‌ಇಎಸ್ ಉಪಾಧ್ಯಕ್ಷ ಅಶ್ವಥ್ ನಾರಾಯಣ್ ಶೆಟ್ಟಿ, ಸಿ.ಆರ್. ನಾಗರಾಜ್, ಪ್ರಾಂಶುಪಾಲ ಡಾ. ಎಚ್. ಆರ್. ಮಹದೇವಸ್ವಾಮಿ, ಡಾ.ಪಿ. ಮಂಜುನಾಥ್ , ಸತ್ಯನಾರಾಯಣ್, ಎಲ್.ಕೆ .ಶ್ರೀಪತಿ, ಎನ್. ಶರತ್ ಉಪಸ್ಥಿತರಿದ್ದರು.



**National Level Technical Symposium – PLASMA 2018**
**12.11.2019**

ವಿಜಯವಾಣಿ ಮಂಗಳವಾರ 25 ಡಿಸೆಂಬರ್ 2018

## ಜೆಎನ್‌ಎನ್‌ಸಿಇ ವಿದ್ಯಾರ್ಥಿಗಳಿಗೆ ಬಹುಮಾನ

ಶಿವಮೊಗ್ಗ: ಭಾರತ ಸರ್ಕಾರದ ಸ್ಟಾರ್ಟ್‌ಅಪ್ ಇಂಡಿಯಾ ಬೆಂಗಳೂರಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ನೂತನ ಯೋಜನೆಗಳ ಬೂಟ್ ಕ್ಯಾಂಪ್ ಕಾರ್ಯಕ್ರಮದಲ್ಲಿ ಜೆಎನ್‌ಎನ್‌ಸಿಇ ಕಾಲೇಜಿಗೆ ಬಹುಮಾನ ಲಭಿಸಿದೆ.

ಡಾ. ಎಲ್.ಕೆ.ಶ್ರೀಪತಿ ಹಾಗೂ ಪ್ರಾಧ್ಯಾಪಕ ಎಸ್.ಜಿ.ಚೇತನ್ ಮಾರ್ಗದರ್ಶನದಲ್ಲಿ ಮೆಕ್ಯಾನಿಕಲ್ ವಿದ್ಯಾರ್ಥಿ ಆರ್.ಸಿ.ಶಶಾಂಕ್ ತ್ಯಾಜ್ಯಗಳಿಂದ ಇಂಧನ ಪರಿವರ್ತನೆ ಯೋಜನೆ ಸಿದ್ಧಪಡಿಸಿದ್ದರು. ಯೋಜನೆಗೆ ದ್ವಿತೀಯ ಬಹುಮಾನ ಲಭಿಸಿದೆ. ಸಿವಿಲ್ ವಿಭಾಗದ ವಿದ್ಯಾರ್ಥಿಗಳಾದ ಮೊಹಮದ್ ಮೆಹರಾನ್, ಮೊಹಮದ್ ಆಬೀದ್, ಕಾಫೀಲ ಅಹಮದ್, ಗಿರೀಶ್ ಕುಮಾರ್, ಸೈಯದ್ ಇಮ್ರಾನ್ ತ್ಯಾಜ್ಯಗಳ ನಿರ್ವಹಣೆ ಮತ್ತು ಮರು ಬಳಕೆ ಯೋಜನೆ ಸಿದ್ಧಪಡಿಸಿದ್ದರು. ನ್ಯೂ ಏಜ್ ಇನ್‌ಕ್ಯೂಬೇಷನ್ ಸೆಂಟರ್ ಪ್ರಾದೇಶಿಕ ಸಂಯೋಜನಾಧಿಕಾರಿ ಕೆ.ಎಸ್.ಮಲ್ಲೇಶ್ ಕುಮಾರ್ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಯೋಜನೆಗೆ ತೃತೀಯ ಬಹುಮಾನ ಲಭಿಸಿದೆ ಎಂದು ಪ್ರಾಚಾರ್ಯ ಡಾ. ಎಚ್.ಆರ್. ಮಹಾದೇವಸ್ವಾಮಿ ತಿಳಿಸಿದ್ದಾರೆ.



ಬಹುಮಾನ ಪಡೆದ ಜೆಎನ್‌ಎನ್‌ಸಿಇ ತಂಡ.

ವಿಜಯ ಕರ್ನಾಟಕ ಬುಧವಾರ, 26 ಡಿಸೆಂಬರ್ 2018,

## ಜೆಎನ್‌ಎನ್‌ಸಿಇ ಕಾಲೇಜಿಗೆ ಹಲವು ಪ್ರಶಸ್ತಿ

ಶಿವಮೊಗ್ಗ: ಕೇಂದ್ರ ಸರಕಾರದ ಸ್ಟಾರ್ಟ್‌ಅಪ್ ಇಂಡಿಯಾದಿಂದ ಇತ್ತೀಚೆಗೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ನೂತನ ಯೋಜನೆಗಳ ಬೂಟ್ ಕ್ಯಾಂಪ್ ಕಾರ್ಯಕ್ರಮದಲ್ಲಿ ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ನೂತನ ಕ್ರಿಯಾಶೀಲ ಯೋಜನೆಗಳಿಗೆ ಬಹುಮಾನ ಲಭಿಸಿದೆ.

ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಯಾದ ಆರ್.ಸಿ. ಶಶಾಂಕ ಅವರ 'ತ್ಯಾಜ್ಯಗಳಿಂದ ಇಂಧನವಾಗಿ ಪರಿವರ್ತನೆ' ನೂತನ ಯೋಜನೆಯು ಉಪ ಪ್ರಾಂಶುಪಾಲ ಡಾ.ಎಲ್. ಕೆ.ಶ್ರೀಪತಿ ಮತ್ತು ಪ್ರಾಧ್ಯಾಪಕ ಎಸ್.ಜಿ.ಚೇತನ್ ಅವರ ಮಾರ್ಗದರ್ಶನದಲ್ಲಿ ರೂಪಗೊಳ್ಳುತ್ತಿದ್ದು, ಈ ಯೋಜನೆಗೆ ದ್ವಿತೀಯ ಬಹುಮಾನ ಲಭಿಸಿದೆ.

ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ಮೊಹಮದ್ ಮೆಹರಾನ್, ಮೊಹಮದ್ ಆಬೀದ್, ಕಾಫೀಲ ಅಹಮದ್, ಗಿರೀಶ್ ಕುಮಾರ್, ಸೈಯದ್ ಇಮ್ರಾನ್ ಅವರ ತ್ಯಾಜ್ಯಗಳ ನಿರ್ವಹಣೆ ಮತ್ತು ಮರು ಬಳಕೆ ಎಂಬ ಯೋಜನೆಯು ನ್ಯೂ ಏಜ್ ಇನ್‌ಕ್ಯೂಬೇಷನ್ ಸೆಂಟರ್ ಪ್ರಾದೇಶಿಕ ಸಂಯೋಜನಾಧಿಕಾರಿ ಕೆ.ಎಸ್. ಮಲ್ಲೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ರೂಪಗೊಳ್ಳುತ್ತಿದ್ದು, ಈ ಯೋಜನೆಗೆ ತೃತೀಯ ಬಹುಮಾನ ಲಭಿಸಿದೆ.



ರಾಜ್ಯ ಮಟ್ಟದ ನೂತನ ಯೋಜನೆಗಳ ಬೂಟ್ ಕ್ಯಾಂಪ್ ಕಾರ್ಯಕ್ರಮದಲ್ಲಿ ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ನೂತನ ಕ್ರಿಯಾಶೀಲ ಯೋಜನೆಗಳಿಗೆ ಬಹುಮಾನ ಲಭಿಸಿದೆ.

**Boot Camp Prizes 25-12-2018**

ಸಂಯುಕ್ತ ಕರ್ನಾಟಕ

27 ಡಿಸೆಂಬರ್, 2018,

## ವಿದ್ಯಾರ್ಥಿಗಳು ಸಂಶೋಧನಾತ್ಮಕ ಗುಣ ಬೆಳಸಿಕೊಳ್ಳಲಿ

ಸಂ.ಕ.ಸಮಾಚಾರ ಶಿವಮೊಗ್ಗ

ವಿದ್ಯಾರ್ಥಿಗಳು ತರಬೇತಿ ಶಿಬಿರ ಮತ್ತು ಕಾರ್ಯಾಗಾರಗಳಲ್ಲಿ ಕಾಟಾಚಾರಕ್ಕೆ ಪಾಲ್ಗೊಳ್ಳದೆ, ಸಂಪೂರ್ಣ ಮಾಹಿತಿ ಪಡೆದು ಸಂಶೋಧನಾತ್ಮಕ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಧಾರವಾಡ ಐಐಟಿ ನಿರ್ದೇಶಕ ಪ್ರೊ.ಪಿ.ಶೇಷು ಹೇಳಿದರು.

ಇಲ್ಲಿನ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಬುಧವಾರ ಎಂಬಿಎ ಸಭಾಂಗಣದಲ್ಲಿ ಇಂದಿನಿಂದ 30 ರವರೆಗೆ 5 ದಿನಗಳ ಕಾಲ ಹಮ್ಮಿಕೊಂಡಿದ್ದ 'ಇನ್‌ಸ್ಪೈರ್ ಇಂಟರ್ನ್‌ಶಿಪ್ ಕ್ಯಾಂಪ್' ಉದ್ಘಾಟಿಸಿ ಮಾತನಾಡಿದರು.

ಸಂಶೋಧನಾ ಕ್ಷೇತ್ರದಲ್ಲಿ ಶೇ.10ರಷ್ಟು ಮಾತ್ರ ವಿದ್ಯಾರ್ಥಿನಿಯರು ಭಾಗವಹಿಸುತ್ತಿದ್ದಾರೆ. ಆ ಸಂಖ್ಯೆ ಹೆಚ್ಚಾಗಬೇಕು ಎಂಬುವುದು ಸರ್ಕಾರದ ಆಶಯ ಆಗಿದೆ ಎಂದರು.

ಸೀಮಿತ ಪದವಿ ಮತ್ತು ಉದ್ಯೋಗದ ಹಿಂದೆ ಹೋಗದೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು. ಕೇವಲ ಪದವಿ ಮುಗಿಸಿ ಸುಮ್ಮನೆ ಕುಳಿತರೆ ಭವಿಷ್ಯದಲ್ಲಿ ಯಶಸ್ಸು ಸಿಗುವುದಿಲ್ಲ. ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಜ್ಞಾನ ಹೆಚ್ಚಿಸಿಕೊಂಡು, ಸಂಶೋಧನೆಯಲ್ಲಿ ತೊಡಗಿ ದೇಶಕ್ಕೆ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ಜೆಎನ್‌ಎನ್‌ಸಿ ಕಾಲೇಜು ಉಪಪ್ರಾಂಶುಪಾಲ ಎಲ್.ಕೆ.ಶ್ರೀಪತಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಂಪ್ಯೂಟರ್ ಮತ್ತು ಮೊಬೈಲ್ ಬಳಕೆ ಹೆಚ್ಚಾಗಿರುವ ಈ ಕಾಲದಲ್ಲಿ ಭಾರತ ಇನ್ನೂ ಮೂರನೇ ಒಂದು ಭಾಗ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಹೊಂದಿದೆ. ಪರಿಸರ ಮಾಲಿನ್ಯ, ಜನಸಂಖ್ಯೆ ಹೆಚ್ಚಳ, ಹಳೇ ಶಿಕ್ಷಣ ಪದ್ಧತಿ, ಶುದ್ಧ ನೀರು ಹಾಗೂ ಗಾಳಿಯ ಕೊರತೆ ಮುಂತಾದ ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ನೂತನ ಸಂಶೋಧನೆಗಳ ಅಗತ್ಯವಿದೆ ಎಂದರು.

ಎನ್‌ಇಎಸ್ ಅಧ್ಯಕ್ಷ ವಿಶ್ವನಾಥ್, ಉಪಾಧ್ಯಕ್ಷ ಟಿ.ಆರ್. ಅಶ್ವತ್ಥನಾರಾಯಣ, ಪ್ರಾಂಶುಪಾಲ ಹೆಚ್.ಆರ್. ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಎನ್. ನಾಗರಾಜ್, ಸಂಚಾಲಕ ಗಿರೀಶ್, ಪ್ರೊ.ಹೆಚ್.ಬಿ. ಸುರೇಶ್, ಪ್ರೊ. ಬಸಪ್ಪಾಜಿ ಮತ್ತಿತರರಿದ್ದರು.



ಶಿವಮೊಗ್ಗದ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಬುಧವಾರ 'ಇನ್‌ಸ್ಪೈರ್ ಇಂಟರ್ನ್‌ಶಿಪ್ ಕ್ಯಾಂಪ್'ನ್ನು ಧಾರವಾಡ ಐಐಟಿ ನಿರ್ದೇಶಕರಾದ ಪ್ರೊ.ಪಿ. ಶೇಷು ಉದ್ಘಾಟಿಸಿದರು.

**DST-INSPIRE Internship CAMP**
**26.12.2018 to**
**30.12.2018**

ವಿಜಯವಾಣಿ ಶನಿವಾರ 5 ಜನವರಿ 2019

ಗ್ರಾಹಕರ ಬೇಡಿಕೆಯಂತೆ ಸೇವೆ ನೀಡಿ | ವಿಐಎಸ್‌ಪಿ ಮುಖ್ಯಸ್ಥ ಮೋಹನ್‌ರಾಜ್ ಶೆಟ್ಟಿ ಸಲಹೆ

## ಆಧುನಿಕತೆಯಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಅವಶ್ಯ

■ ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ

ಆಧುನಿಕ ಕಾಲಕ್ಕೆ ಅನುಗುಣವಾಗಿ ಮಾರುಕಟ್ಟೆಯಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಅವಶ್ಯಕ ಎಂದು ಭದ್ರಾವತಿ ವಿಐಎಸ್‌ಪಿ ಮುಖ್ಯಸ್ಥ ಮೋಹನ್‌ರಾಜ್ ಶೆಟ್ಟಿ ಅಭಿಪ್ರಾಯಪಟ್ಟರು.

ಜೆಎನ್‌ಎನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗ ಆಯೋಜಿಸಿದ್ದ 'ಡಿಜಿಟಲ್ ಮಾರ್ಕೆಟಿಂಗ್' ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಡಿಜಿಟಲ್ ತಂತ್ರಜ್ಞಾನದ ನೆರವಿನಿಂದ ಮಾರುಕಟ್ಟೆಯಲ್ಲಿ ಮಹತ್ತರ ಬದಲಾವಣೆ ಆಗಿವೆ. ಮಾರುಕಟ್ಟೆ ಕ್ಷೇತ್ರದ ವ್ಯಾಪ್ತಿ ಅಧಿಕವಾಗುತ್ತಲೇ ಇದೆ ಎಂದರು.

ಡಿಜಿಟಲ್ ಯುಗದಲ್ಲಿ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಮಾರುಕಟ್ಟೆ ಸೇವೆ ನೀಡಲು ಸಾಧ್ಯ. ಸ್ಪರ್ಧಾತ್ಮಕ ಜಗತ್ತಿನಲ್ಲಿ ವೇಗ, ಗುಣಮಟ್ಟ ಹಾಗೂ ಅಗತ್ಯ ಸೇವೆಗಳನ್ನು ತಲುಪಿಸಬಹುದಾಗಿದೆ. ಡಿಜಿಟಲ್ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಸೇವೆ ತಲುಪಿಸಲು ವೇಗ ಮುಖ್ಯ ಎಂದು ಹೇಳಿದರು.

ಉದ್ದಿಮೆದಾರರಿಗೆ ಡಿಜಿಟಲ್ ಪ್ಲಾಟ್‌ಫಾರಂ ಅತ್ಯುತ್ತಮ ವೇದಿಕೆ ಸೃಷ್ಟಿಸಿದೆ. ಗ್ರಾಹಕರ ಅವಶ್ಯಕತೆಗಳಿಗೆ ಪೂರಕವಾಗಿ ಡಿಜಿಟಲ್ ಪ್ಲಾಟ್‌ಫಾರಂ ಬಳಸಿಕೊಳ್ಳಬೇಕಿದೆ. ಉತ್ತಮ ಸಂವಹನದ ಮೂಲಕ ಗ್ರಾಹಕರ ಬೇಡಿಕೆಗಳ ಪೂರೈಸಲು ಹೊಸ ರೀತಿ ಆಲೋಚನೆಗಳಿಗೆ ತೆರೆದುಕೊಳ್ಳಬೇಕಿದೆ ಎಂದರು.

ಮಾರುಕಟ್ಟೆಯಲ್ಲಿ ಆರ್ಥಿಕ ವಹಿವಾಟು ಕೂಡ ಮುಖ್ಯ. ವ್ಯಾಪಾರ ವಹಿವಾಟಿನಲ್ಲಿ ಇ-ಪೇಮೆಂಟ್ ಹಾಗೂ ಹಣಕಾಸಿನ ವ್ಯವಹಾರಗಳಲ್ಲಿ ಸುರಕ್ಷತೆ ಹಾಗೂ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಸಮಸ್ಯೆಗಳಾಗದಂತೆ ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದರು.

ಜೆಎನ್‌ಎನ್‌ಸಿಇ ಪ್ರಾಚಾರ್ಯ ಡಾ. ಎಚ್.ಆರ್.ಮಹಾದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗ ಮುಖ್ಯಸ್ಥ ಶ್ರೀಕಾಂತ್ ಪ್ರಾಸ್ತಾವಿಕ ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಎ.ಎಸ್. ವಿಶ್ವನಾಥ್, ಕಾರ್ಯದರ್ಶಿ ಎಸ್.ಎನ್.ನಾಗರಾಜ್, ಎಂ.ಜಿ.ಕೃಷ್ಣಮೂರ್ತಿ, ಡಾ. ಶ್ರೀನಿವಾಸ್, ಡಾ. ಎಲ್.ಕೆ.ಶ್ರೀಪತಿ ಇತರರಿದ್ದರು.



'ಡಿಜಿಟಲ್ ಮಾರ್ಕೆಟಿಂಗ್' ಸಮ್ಮೇಳನವನ್ನು ಭದ್ರಾವತಿ ವಿಐಎಸ್‌ಪಿ ಮುಖ್ಯಸ್ಥ ಮೋಹನ್‌ರಾಜ್ ಶೆಟ್ಟಿ ಉದ್ಘಾಟಿಸಿದರು.

ತಂತ್ರಜ್ಞಾನ ದಶಕಗಳ ಹಿಂದಿನ ವ್ಯಾಪಾರ ವಹಿವಾಟಿಗೂ ಪ್ರಸ್ತುತ ಮಾರುಕಟ್ಟೆ ವಹಿವಾಟಿಗೂ ವ್ಯಾಪಕ ಬದಲಾವಣೆ ಇದೆ. ಸಾಮಾಜಿಕ ಜಾಲತಾಣಗಳು ಮಾರ್ಕೆಟಿಂಗ್‌ನಲ್ಲಿ ಪಾತ್ರ ವಹಿಸುತ್ತಿವೆ. ಪರಿಣಾಮಕಾರಿ ಬಳಕೆ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು.

| ಕೆ.ಎಸ್.ಸೋನಲ್ ಸಾಂಡಿಲ್ಯಾ ಉದ್ಯಮಿ

ಡಿಜಿಟಲ್ ಮಾರ್ಕೆಟಿಂಗ್ ಮಾರುಕಟ್ಟೆಯಲ್ಲಿ ಪ್ರತಿನಿತ್ಯದ ಬದಲಾವಣೆಗಳ ಪರಿಷ್ಕರಣೆ ಅವಶ್ಯಕ. ತಂತ್ರಜ್ಞಾನದಲ್ಲಿ ಹೊಸ ಆವಿಷ್ಕಾರಗಳು ಆಗುತ್ತಿರುತ್ತವೆ. ಹೊಸ ವಿಷಯಗಳ ಕಲಿಕೆ ಹಾಗೂ ಅಳವಡಿಸುವಿಕೆಯಲ್ಲಿ ಹಿನ್ನಡೆ ಅನುಭವಿಸಿದರೆ ಮಾರ್ಕೆಟಿಂಗ್‌ನಲ್ಲಿ ಕಷ್ಟ ಆಗುತ್ತದೆ. ಹೊಸ ತಂತ್ರಜ್ಞಾನದೊಂದಿಗೆ ಉದ್ಯಮದಲ್ಲಿ ಮುನ್ನಡೆಯಬೇಕು.

| ಮೋಹನ್‌ರಾಜ್ ಶೆಟ್ಟಿ ಭದ್ರಾವತಿ ವಿಐಎಸ್‌ಪಿ ಮುಖ್ಯಸ್ಥ

ವಿಜಯ ಕರ್ನಾಟಕ ಗುರುವಾರ, 3 ಜನವರಿ 2019,

## 4, 5ಕ್ಕೆ ಅಂತಾರಾಷ್ಟ್ರೀಯ ಸಮ್ಮೇಳನ

**ಶಿವಮೊಗ್ಗ:** ಜೆಎನ್‌ಎನ್‌ಸಿಇ ಕಾಲೇಜಿನ ಎಂಬಿಎ ವಿಭಾಗದಿಂದ ಜ.4 ಮತ್ತು 5ರಂದು ಕಾಲೇಜು ಸಭಾಂಗಣದಲ್ಲಿ ಡಿಜಿಟಲ್ ಮಾರ್ಕೆಟಿಂಗ್ ವಿಷಯ ಕುರಿತು 2ದಿನದ ಅಂತಾರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗಿದೆ. ಜ.4ರಂದು ವಿಐಎಸ್‌ಪಿ ಮುಖ್ಯಸ್ಥ ಮೋಹನ್‌ರಾಜ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬೆಂಗಳೂರಿನ ಕ್ರಿಯೇಟಿವ್ ಕನ್ಸಲ್‌ಟೆಂಟ್ ಪ್ರಾಂಶುಪಾಲ ಕೆ.ಎಸ್. ಸೋನಾಲ್ ಶಾಂಡಿಲ್ಯ, ಎನ್‌ಇಎಸ್ ಅಧ್ಯಕ್ಷ ಎ.ಎಸ್. ವಿಶ್ವನಾಥ, ಕಾರ್ಯದರ್ಶಿ ಎಸ್. ಎನ್. ನಾಗರಾಜ್, ಜೆಎನ್‌ಎನ್‌ಸಿಇ ಪ್ರಾಂಶುಪಾಲ ಎಚ್.ಆರ್. ಮಹದೇವಸ್ವಾಮಿ, ಉಪ ಪ್ರಾಂಶುಪಾಲ ಎಲ್.ಕೆ. ಶ್ರೀಪತಿ ಭಾಗವಹಿಸುವರು. 5ರಂದು ಸಮಾರೋಪದಲ್ಲಿ ಬೆಂಗಳೂರಿನ ಫಸ್ಟ್‌ಲೈಫ್ ಕೋ- ಫೌಂಡರ್ ಸುಬ್ರಮಣ್ಯ ಬಸವನಹಳ್ಳಿ, ಕೆನರಾ ಬ್ಯಾಂಕ್ ಎಜಿಎಂ ಎಂ.ಆರ್.ಶ್ರೀಕಾಂತ್, ಎನ್‌ಎಎಸ್ ಉಪಾಧ್ಯಕ್ಷ ಟಿ.ಆರ್. ಅಶ್ವತ್‌ನಾರಾಯಣ ಶೆಟ್ಟಿ, ಸಿ. ಆರ್.ನಾಗರಾಜ್, ಎಲ್.ಕೆ. ಶ್ರೀಪಾದ ಮತ್ತಿತರರು ಪಾಲ್ಗೊಳ್ಳುವರು.

**International Conference on Marketing in Digital World: Trends, Opportunities & Challenges**
**4-5 January 2019**


ವಿಜಯ ಕರ್ನಾಟಕ ಬುಧವಾರ, 9 ಜನವರಿ 2019

ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ರಾಷ್ಟ್ರೀಯ ಕಾರ್ಯಾಗಾರ

# ಜ್ಞಾನ ಸದ್ಬಳಕೆಯಲ್ಲಿ ಉದ್ಯೋಗ ಸೃಷ್ಟಿ ಅಡಕ

ಶಿವಮೊಗ್ಗ ಜೆಎನ್‌ಎನ್ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ರಾಷ್ಟ್ರೀಯ ಕಾರ್ಯಾಗಾರವನ್ನು ಬೆಂಗಳೂರಿನ ಐಐಎಸ್‌ಸಿ ಸಿಬಿಡಿಟಿ ನೆಟ್‌ವರ್ಕ್ ಯೋಜನೆ ಮಾಜಿ ಮುಖ್ಯಸ್ಥ ಅಶೋಕ್ ರಾವ್ ಉದ್ಘಾಟಿಸಿದರು.


ಕನ್ನಡಪ್ರಭ ಬುಧವಾರ 9.1.2019

ಜ್ಞಾನ ಸದ್ಬಳಸಿ, ಉದ್ಯೋಗ ಸೃಷ್ಟಿಸಿ

**Five Day National Level Workshop on DSP and Image Processing through Machine Learning 8-12, January 2019**


ಮಂಗಳವಾರ 15 ಜನವರಿ 2019 ವಿಜಯವಾಣಿ

ಶಿವಮೊಗ್ಗದ 8, ಮೈಸೂರಿನ 4 ಸ್ಟೇಡಿಯಂಗಳಲ್ಲಿ ಪಂದ್ಯ | 96 ತಂಡಗಳು ಭಾಗಿ

# ದಕ್ಷಿಣ ವಲಯ ಅಂತರ ವಿವಿ ಕ್ರಿಕೆಟ್ ಆರಂಭ

## ದಾಖಲೆಗಾಗಿ ಪಾಲ್ಗೊಳ್ಳಬೇಡಿ

ಶಿವಮೊಗ್ಗದಲ್ಲಿ ದಕ್ಷಿಣ ವಲಯ ಕ್ರಿಕೆಟ್ ಪಂದ್ಯಾವಳಿಗೆ ಭಾರತ ಮಹಿಳಾ ತಂಡದ ವೇಗಿ ಕೃಷ್ಣಮೂರ್ತಿ ಚಾಲನೆ ನೀಡಿದರು.

**South Zone Inter University (Men) Cricket Tournament 14-23, January 2019**


ವಿಜಯ ಕರ್ನಾಟಕ ಮಂಗಳವಾರ, 29 ಜನವರಿ 2019

ಜೆಎನ್‌ಎನ್‌ಸಿಇನಲ್ಲಿ ರಾಷ್ಟ್ರಮಟ್ಟದ ಕಾರ್ಯಾಗಾರ

# ಎಲ್‌ಟಿಇ ವೇಗ ಹೆಚ್ಚಳ ಇಂದಿನ ಜರೂರಿ


ವಿಜಯವಾಣಿ ಮಂಗಳವಾರ 29 ಜನವರಿ 2019

ವಿದ್ಯಾಸಂಘದ ಸಿಇಒ ಕಿಶೋರ್ ಅಭಿಮತ | ಜೆಎನ್‌ಎನ್‌ಸಿಇಯಲ್ಲಿ ಕಾರ್ಯಾಗಾರ

# 4ಜಿ ಸಂಪೂರ್ಣ ಸೇವೆಗೆ ಹೆಚ್ಚಿನ ಸಂಶೋಧನೆ ಅಗತ್ಯ

**One Week National Level Workshop on LTE-Advanced and its Research Challenges 28.01.2019 – 01.02.2019**

ವಿಜಯವಾಣಿ
ಕನ್ನಡ ದಿನಪತ್ರಿಕೆ
ಸೋಮವಾರ • 28 ಜನವರಿ 2019

■ ಮೆಕ್ಯಾನಿಕಲ್ ವಿಭಾಗದಿಂದ ಮೆಟೀರಿಯಲ್ ಕ್ಯಾರೆಕ್ಟರೈಜೇಷನ್ ಕುರಿತು ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟನೆ: ಬೆಂಗಳೂರಿನ ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರೀಸ್ ವಿಜ್ಞಾನಿ ಡಾ. ಅಂಜನಾ ಜೈನ್, ಉಪಸ್ಥಿತಿ: ಡಿಆರ್‌ಡಿಒ ವಿಜ್ಞಾನಿ ಡಾ. ರಾಜೀವ್ ಜೈನ್, ಅಧ್ಯಕ್ಷತೆ: ಪ್ರಾಚಾರ್ಯ ಡಾ.ಎಚ್. ಆರ್. ಮಹಾದೇವಸ್ವಾಮಿ, ಸ್ಥಳ: ಜೆಎನ್‌ಎನ್‌ಸಿ ಕಾಲೇಜು, ಬೆಳಗ್ಗೆ 9.30ಕ್ಕೆ

ವಿಜಯ ಕರ್ನಾಟಕ
ಭಾನುವಾರ, 27 ಜನವರಿ 2019, ಶಿವಮೊಗ್ಗ

## ಜೆಎನ್‌ಎನ್‌ಸಿಇಯಲ್ಲಿ ಕಾರ್ಯಾಗಾರ

ಶಿವಮೊಗ್ಗ: ನಗರದ ಜವಾಹರಲಾಲ್ ನೆಹರು ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗವು ಹೊಸದಿಲ್ಲಿಯ ಐಇಟಿಇ ಸಹಯೋಗದಲ್ಲಿ ಐದು ದಿನಗಳ ವಿದ್ಯಾರ್ಥಿ ಕಾರ್ಯಾಗಾರವನ್ನು ಜ.28ರಿಂದ ಫೆಬ್ರವರಿ 1ರವರೆಗೆ ಹಮ್ಮಿಕೊಂಡಿದೆ.

ಈ ಐದು ದಿನಗಳ ಕಾರ್ಯಕ್ರಮವು ಎಲೆಕ್ಟ್ರಾನಿಕ್ಸ್ ತಂತ್ರಾಂಶ, ಸಂವೇದಕ ಮತ್ತು ಅಂತರ್ಜಾಲ ಸಂಪರ್ಕ ಅಂತರ್ಗತವಾಗಿರುವ ಭೌತಿಕ ವಸ್ತುಗಳ ಪರಿಕಲ್ಪನೆ ಮತ್ತು ತಂತ್ರಜ್ಞಾನಗಳ ಬಗ್ಗೆ ತಿಳಿವಳಿಕೆಯನ್ನು ನೀಡಲಿದೆ. ನೋಡ್ ಎಂಸಿಯು, ರಾಸ್‌ಬೆರಿ ಪೈ ಇತ್ಯಾದಿ ತಂತ್ರಜ್ಞಾನಗಳ ಬಗ್ಗೆ ಪ್ರಾಯೋಗಿಕವಾಗಿ ತಿಳಿಸಿಕೊಡಲಾಗುವುದು. ಕಾರ್ಯಾಗಾರದಲ್ಲಿ ರಾಜ್ಯದ ಹಲವು ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗ ಮುಖ್ಯಸ್ಥ ಡಾ. ಪಿ.ಮಂಜುನಾಥ್ ತಿಳಿಸಿದ್ದಾರೆ.

ಹೊಸ ದಿಗಂತ
ಸೋಮವಾರ, 28 ಜನವರಿ 2019, ಶಿವಮೊಗ್ಗ

## ಜೆಎನ್‌ಎನ್‌ಸಿಯಲ್ಲಿ ರಾಷ್ಟ್ರೀಯ ಕಾರ್ಯಾಗಾರ

ಶಿವಮೊಗ್ಗ: ಜೆಎನ್‌ಸಿಸಿ ಕಾಲೇಜಿನ ಯಾಂತ್ರಿಕ ವಿಭಾಗದಿಂದ ಮೆಟೀರಿಯಲ್ ಕ್ಯಾರೆಕ್ಟರೈಜೇಷನ್ ವಿಷಯ ಕುರಿತು ಜನವರಿ 28ರಿಂದ ಫೆ.1ರವರೆಗೆ ಒಂದು ವಾರದ ರಾಷ್ಟ್ರೀಯ ಕಾರ್ಯಗಾರವನ್ನು ಆಡಳಿತ ಮಂಡಳಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಬೆಂಗಳೂರಿನ ನ್ಯಾಷನಲ್ ಏರೋಸ್ಪೇಸ್ ಲ್ಯಾಬೋ ರೇಟರೀಸ್ ವಿಜ್ಞಾನಿಗಳಾದ ಡಾ. ಅಂಜನಾ ಜೈನ್, ಗ್ಯಾಸ್ ಮತ್ತು ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್ಮೆಂಟ್, ಡಿಆರ್‌ಡಿಒ ವಿಜ್ಞಾನಿ ಡಾ. ರಾಜೀವ್ ಜೈನ್ ಹಾಗೂ ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಆರ್.ಮಹಾ ದೇವಸ್ವಾಮಿ, ಉಪ ಪ್ರಾಂಶುಪಾಲ ಎಲ್.ಕೆ. ಶ್ರೀಪತಿ ಮತ್ತು ಕಾರ್ಯಾಗಾರದ ಆಯೋಜಕ ಎಂ.ಎಂ. ರತನ್ ಹೆಗ್ಡೆ, ಎನ್‌ಇಎಸ್ ಅಧ್ಯಕ್ಷ ವಿಶ್ವನಾಥ, ಕಾರ್ಯದರ್ಶಿ ಎಸ್.ಎನ್. ನಾಗರಾಜ್, ಖಜಾಂಚಿ ಸಿ.ಆರ್. ನಾಗರಾಜ್ ಮತ್ತಿತರರು ಪಾಲ್ಗೊಳ್ಳುವರು.

**One Week National Level Workshop on Material Characterization 28.01.2019 – 01.02.2019**

ಪ್ರಜಾವಾಣಿ
ಶನಿವಾರ • ಫೆಬ್ರುವರಿ 16, 2019

ಇನ್ವೆಂಟಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಮೀರ್ ಕುಮಾರ್

## ಯುವಕರಲ್ಲಿ ಉದ್ಯಮಶೀಲತೆ ಗುಣ ಇರಲಿ

ಪ್ರಜಾವಾಣಿ ವಾರ್ತೆ



ಶಿವಮೊಗ್ಗ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಕರ್ನಾಟಕ ತಾಂತ್ರಿಕ ಉದ್ಯಮಶೀಲತೆ ಸಮಾವೇಶ–2019 ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ಇನ್ವೆಂಟಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಮೀರ್ ಕುಮಾರ್ ಉದ್ಘಾಟಿಸಿದರು

ಶಿವಮೊಗ್ಗ: ಯುವಕರಲ್ಲಿ ಉದ್ಯಮ ಶೀಲತೆ ಗುಣಗಳನ್ನು ಮೈಗೂಡಿದಾಗ ಯಶಸ್ವಿ ಉದ್ದಿಮೆದಾರರಾಗಿ ರೂಪುಗೊಳ್ಳಲು ಸಾಧ್ಯ ಎಂದು ಬೆಂಗಳೂರಿನ ಇನ್ವೆಂಟಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಮೀರ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ತಾಂತ್ರಿಕ ಉದ್ಯಮಶೀಲತೆ ಸಮಾವೇಶ-2019 ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು.

ನಿರುದ್ಯೋಗಿ ಯುವಕರಿಗೆ ಉದ್ಯಮಶೀಲತಾ ಕಾರ್ಯಾಗಾರಗಳು ಪ್ರಯೋಜನಕಾರಿಯಾಗಿವೆ. ಪ್ರತಿಯೊಬ್ಬರು ಇದರ ಸದುಪಯೋಗ ಪಡೆಯಬೇಕು. ಅಲ್ಲದೆ, ಸರ್ಕಾರ ಇಂದು ತಾಂತ್ರಿಕ ನೈಪುಣ್ಯತೆ ಪಡೆದು ಪದವಿ ಮುಗಿಸಿ ಹೊರಬರುವ ಸಾವಿರಾರು ನಿರುದ್ಯೋಗಿ ಯುವಕರಿಗೆ ಇಂತಹ ಹತ್ತು ಹಲವು ಸಮಾವೇಶಗಳನ್ನು ಏರ್ಪಡಿಸುತ್ತಿದೆ. ಈ ಮೂಲಕ ಅವರನ್ನು ಉದ್ಯಮಶೀಲರನ್ನಾಗಿ ಮಾಡುತ್ತಿದೆ ಎಂದು ಹೇಳಿದರು.

ಎನ್‌ಇಎಸ್ ಅಧ್ಯಕ್ಷ ವಿಶ್ವನಾಥ್, 'ಪ್ರಸ್ತುತ ತಾಂತ್ರಿಕ ವಿದ್ಯಾಲಯಗಳ ಸಂಖ್ಯೆ ಹೆಚ್ಚಾಗಿದ್ದು, ಉದ್ಯೋಗಾವಕಾಶ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಸ್ವಂತ ಉದ್ಯೋಗ ಮಾಡಲು ಸರ್ಕಾರದಿಂದ ಯಾವ ರೀತಿ ನೆರವು ಪಡೆಯಬಹುದು ಮತ್ತು ಯಾವ ಉದ್ಯೋಗಕ್ಕೆ ಹೆಚ್ಚಿನ ಬೇಡಿಕೆಯಿದೆ ಎಂಬುದನ್ನು ತಿಳಿಯಲು ಈ ರೀತಿಯ ಕಾರ್ಯಕ್ರಮಗಳು ಸಹಕಾರಿಯಾಗಲಿವೆ' ಎಂದರು.

ಪ್ರಾಂಶುಪಾಲ ಡಾ.ಎಚ್.ಆರ್. ಮಹದೇವಸ್ವಾಮಿ ಮಾತನಾಡಿದರು.

ಎನ್‌ಇಎಸ್ ಕೋಶಾಧಿಕಾರಿ ಸಿ.ಆರ್.ನಾಗರಾಜ್, ಕಾರ್ಯದರ್ಶಿ ನಾಗರಾಜ್, ಉಪ ಪ್ರಾಂಶುಪಾಲ ಡಾ.ಎಲ್.ಕೆ.ಶ್ರೀಪತಿ ಹಾಗೂ ಎನ್‌ಇಎಸ್ ನಿರ್ದೇಶಕರು, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಪದಾಧಿಕಾರಿಗಳು, ಕಾಸಿಯಾದ ಪದಾಧಿಕಾರಿಗಳು, ಯುವ ಕೈಗಾರಿಕೋದ್ಯಮಿಗಳು ಇದ್ದರು.

DECCAN HERALD
Saturday, December 8, 2018



MLA K S Eshwarappa inaugurates curtain raiser programme on 'Karnataka Tech Entrepreneurship Summit-2019', at JNNCE in Shivamogga on Friday. JNNCE Principal H R Mahadevaswamy, National Education Society Vice-president Ashwath Narayana Shetty, Secretary S N Nagaraja and President A S Vishwanath are seen. DH PHOTO

DECCAN HERALD Friday, February 15, 2019

## KTES-2019 aims to make Shivamogga hub of start-ups

### 'Street vendors, small traders too are entrepreneurs'

**SHIVAMOGGA: In order to trigger entrepreneurship spirit in young minds, the Jawaharlal Nehru National College of Engineering (JNNCE) organised a three-day Karnataka Tech-Entrepreneurship Summit (KTES) on its campus on Thursday, wherein investors, established entrepreneurs, budding industrialists, and engineering graduates participated and exchanged ideas, concepts among themselves to promote entrepreneurship in tier-II city like Shivamogga.**



KTES: Bengaluru-based Inventus India Managing Director Samir Kumar (second from left) releases the souvenir during the inauguration of three-day Karnataka Tech-Entrepreneurship Summit (KTES) in Shivamogga on Thursday. National Education Society President Vishwanatha, Secretary Nagaraj, Principal H R Mahadevaswamy, and Vice-principal L K Sripathy are seen. DH PHOTO

More than 200 delegates from various parts of the State including investors, entrepreneurs, and graduates participated in the event.

Inaugurating the event, Bengaluru-based Inventus India Managing Director Samir Kumar said, he is hopeful that the event would spark entrepreneurship ideas among youngsters and encourage them to establish industries which would provide employment for people of the region.

Speaking on the occasion, National Education Society Secretary S N Nagaraj said, the unorganised sector contributes 50% to the country's gross domestic product growth. This is a clear indication that street vendors, and small traders are entrepreneurs in their own way, and they are contributing to the country's progress, he noted. There is a need to collect data of all such entrepreneurs. Data analysis is going to play a vital role in the progress of the country. Data analysis helps to plan and take the right decisions for the welfare of the society, he said.

Speaking on the occasion, National Education Society President A S Vishwanatha said, commitment, and perseverance are the key to gain success in entrepreneurship.

Citing the example for National Education Society, he said, a group of ten persons started the society with a high school by investing Rs 100 each. The founders had peddled bicycles to mobilise funds to develop the institute in the past. They did not lead luxurious life as many would do today soon after becoming an entrepreneur, he added.

Similarly, he said, youths must have commitment, patience, and skill to flourish in the industrial sector. They must not think of leading a luxurious life soon after establishing an industry, he advised.

Presiding over the event, JNNCE Principal H R Mahadevaswamy said, the main objective of the summit is to bring entrepreneurs, investors, graduates, and budding entrepreneurs together on a single platform and promote entrepreneurship in tier-II cities like Shivamogga.

JNNCE Vice-Principal L K Sreepathi was also present.

DH News Service

**Automated water overflow controller**

There were around 15 stalls of various products on the college campus as part of the summit.

Among them, automated water over-flow controller designed by Shimtek Automations Private Limited, women start-up initiative, Machenahalli, Shivamogga, attracted the visitors. The machine would cost around Rs 1,000 which operates the motor when the water tank set up on the house runs out of water, and it switches off the motor when the tank gets filled.

THE HINDU MANGALURU
FRIDAY, FEBRUARY 15, 2019

## KTES 2019 begins in Shivamogga

STAFF REPORTER
SHIVAMOGGA

The three-day 'Karnataka Tech Entrepreneurship Summit (KTES) 2019' organised by Jawaharlal Nehru National College of Engineering(JNNCE) here on its campus to promote entrepreneur activities in tier-2 and tier-3 cities was off to an enthusiastic start on Thursday.



Samir Kumar (third from right), Managing Director, Inventus India, Bengaluru, in discussion with a product exhibitor during the Karnataka Tech-Entrepreneurship Summit - 2019 in Shivamogga on Thursday. • VAIDYA

Addressing the summit, S.N. Nagaraj, secretary of National Education Society (NES), underscored the need to apprise the youths from tier-2 and tier-3 cities on the career opportunities available in data analytics, cloud computing and artificial intelligence.

He said that the concentration of economic activities in metropolitan centres would result in lopsided economic development. It is necessary to motivate the educated youths from moffusil centres to launch business start-ups by ensuring access to investment for them, providing them the required legal knowledge and training in entrepreneur and marketing skills. A robust start-up eco-system should be created in tier-2 and tier-3 cities to ensure a balanced economic development, he said.

Samir Kumar, entrepreneur, released souvenirs publised by JNNCE to mark the occasion. A.S. Vishwanath, president of NES; H.R. Mahadevaswamy, Principal of JNNCE; and Sripathi L.K., Vice-Principal, were present. An exhibition was held to mark the occasion in which firms engaged in food business, manufacturing automobile components and electronic gadgets displayed their products. Interaction sessions with young entrepreneurs, representatives of venture capital funding firms, researchers and software developers were held.

**Karnataka Tech Entrepreneurship Summit KTES 2019 14- 16, February 2019**

ವಿಜಯವಾಣಿ ಭಾನುವಾರ 10 ಮಾರ್ಚ್ 2019
10 MARCH 2019

## ಕಲೆ, ಸಾಹಿತ್ಯದ ಅರಿವಿನಿಂದ ವ್ಯಕ್ತಿತ್ವ ವಿಕಸನ

ಶಿವಮೊಗ್ಗ: ವೃತ್ತಿಪರ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಜತೆಗೆ ಕಲೆ, ಸಾಹಿತ್ಯ ಸಂಸ್ಕೃತಿ ಬಗ್ಗೆ ಅರಿವು ಮೂಡಿಸಿದಾಗ ಮಾತ್ರ ವಿದ್ಯಾರ್ಥಿಗಳು ವ್ಯಕ್ತಿತ್ವ ವಿಕಸನ ಹೊಂದಲು ಸಾಧ್ಯ ಎಂದು 'ಥಟ್ ಅಂತ ಹೇಳಿ' ಖ್ಯಾತಿಯ ಡಾ. ನಾ.ಸೋಮೇಶ್ವರ ಅಭಿಪ್ರಾಯಪಟ್ಟರು. ಜೆಎನ್ಎನ್ ಇಂಜಿನಿಯರಿಂಗ್ ಕಾಲೇಜಿನ ಎಂಬಿಎ ವಿಭಾಗದಿಂದ ಶುಕ್ರವಾರ ಏರ್ಪಡಿಸಿದ್ದ 'ಉತ್ಥಾನ-2019' ರಾಜ್ಯಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಹಾಗೂ ಮ್ಯಾನೇಜ್‌ಮೆಂಟ್ ಉತ್ಸವದ ಉದ್ಘಾಟನೆ ನೆರವೇರಿಸಿ ಮಾತನಾಡಿ, ನಾಡಿನ ಖ್ಯಾತ ಗಾಯಕ ಡಾ. ಬಾಲಸುಬ್ರಹ್ಮಣ್ಯಂ, ನಂದಿತಾ ಮುಂತಾದವರು ವೃತ್ತಿಯ ಜತೆಗೆ ಪ್ರವೃತ್ತಿಯಲ್ಲೂ ಸಾಧನೆಗೈದಿದ್ದಾರೆ. ವೃತ್ತಿ ಮತ್ತು ಪ್ರವೃತ್ತಿ ಎರಡೂ ಜೀವನಕ್ಕೆ ಅವಶ್ಯ. ಕಲೆ, ಸಾಹಿತ್ಯ, ಸಂಸ್ಕೃತಿ ಬಗ್ಗೆ ವಿದ್ಯಾರ್ಥಿಗಳು ತಿಳಿಯಲು ಇಂತಹ ಸಾಂಸ್ಕೃತಿಕ ಉತ್ಸವ ಸಹಕಾರಿ ಎಂದರು. ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಎಸ್.ಎನ್.ನಾಗರಾಜ್, ಉಪಾಧ್ಯಕ್ಷ ಅಶ್ವತ್ಥನಾರಾಯಣ ಶ್ರೇಷ್ಠಿ, ಜೆಎನ್ಎನ್ ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಆರ್.ಮಹದೇವಸ್ವಾಮಿ, ಎಂಬಿಎ ವಿಭಾಗದ ಮುಖ್ಯಸ್ಥ ಡಾ. ಸಿ.ಶ್ರೀಕಾಂತ್ ಉಪಸ್ಥಿತರಿದ್ದರು.




ಜೆಎನ್ಎನ್ ಎಂಬಿಎ ಕಾಲೇಜಿನಲ್ಲಿ ಉತ್ಥಾನ-2019ಕ್ಕೆ ಕ್ವಿಜ್ ಮಾಸ್ಟರ್ ಡಾ. ನಾ.ಸೋಮೇಶ್ವರ ಚಾಲನೆ ನೀಡಿದರು.

ವಿಜಯ ಕರ್ನಾಟಕ ಶನಿವಾರ, 9 ಮಾರ್ಚ್ 2019,

ಜೆಎನ್ಎನ್‌ಸಿಇಯಲ್ಲಿ ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ

## ವೃತ್ತಿ , ಪ್ರವೃತ್ತಿ ಜೀವನಕ್ಕೆ ಅತ್ಯವಶ್ಯಕ

■ ವಿಕ ಸುದ್ದಿಲೋಕ ಶಿವಮೊಗ್ಗ

ವೃತ್ತಿಪರ ಶಿಕ್ಷಣ ಸಂಸ್ಥೆಗಳು ಪಠ್ಯದ ಜತೆಗೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಅರಿವು ಮೂಡಿಸುವುದರಿಂದ ವಿದ್ಯಾರ್ಥಿಗಳು ವಾಸ್ತವಿಕ ಜೀವನದ ಬಗ್ಗೆ ತಿಳಿದುಕೊಳ್ಳಲು ಸಾಧ್ಯ ಎಂದು ವೈದ್ಯ ಸಾಹಿತಿ ಡಾ. ನಾ.ಸೋಮೇಶ್ವರ್ ಹೇಳಿದರು.

ಜವಾಹರಲಾಲ್ ನೆಹರು ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ ವಿಭಾಗವು ಆಯೋಜಿಸಿರುವ ಉತ್ಥಾನ 2019 ರಾಜ್ಯಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಮತ್ತು ಮ್ಯಾನೇಜ್ ಮೆಂಟ್ ಉತ್ಸವಕ್ಕೆ ಶುಕ್ರವಾರ ಬೆಳಗ್ಗೆ ಚಾಲನೆ ನೀಡಿ ಅವರು ಮಾತನಾಡಿದರು.

ವೃತ್ತಿ ಮತ್ತು ಪ್ರವೃತಿ ಎರಡೂ ಜೀವನಕ್ಕೆ ಅತ್ಯಂತ ಅವಶ್ಯಕ. ಪ್ರವೃತ್ತಿಯನ್ನು ಶಾಸ್ತ್ರೀಯ ಬದ್ಧವಾಗಿ ಕಲಿತು ಹೆಚ್ಚು ತೊಡಗಿಸಿಕೊಳ್ಳುವ ಮೂಲಕ ಅದನ್ನೇ ವೃತ್ತಿಯಾಗಿಸಿಕೊಂಡವರೂ ಇದ್ದಾರೆ. ಖ್ಯಾತ ಗಾಯಕ ಡಾ. ಎಸ್.ಪಿ.ಬಾಲಸುಬ್ರಹ್ಮಣ್ಯ, ಗಾಯಕಿ ನಂದಿತಾ ಮತ್ತಿತರರು ವೃತ್ತಿಪರ ಶಿಕ್ಷಣದಲ್ಲಿದ್ದು ಆನಂತರದಲ್ಲಿ ಗಾಯನವನ್ನೇ ವೃತ್ತಿಯಾಗಿಸಿಕೊಂಡರು. ಕಲೆ, ಸಾಹಿತ್ಯ , ಸಂಸ್ಕೃತಿ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲು ಸಾಂಸ್ಕೃತಿಕ ಉತ್ಸವಗಳು ಸಹಕಾರಿ ಎಂದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಕಾರ್ಯದರ್ಶಿ ಎಸ್.ಎನ್.ನಾಗರಾಜ್, ಉಪಾಧ್ಯಕ್ಷ ಅಶ್ವತ್ ನಾರಾಯಣ ಶ್ರೇಷ್ಠಿ, ಪ್ರಾಂಶುಪಾಲ ಡಾ. ಎಚ್. ಆರ್.ಮಹದೇವಸ್ವಾಮಿ, ಎಂಬಿಎ ವಿಭಾಗದ ಮುಖ್ಯಸ್ಥ ಡಾ. ಸಿ.ಶ್ರೀಕಾಂತ್ ಹಾಜರಿದ್ದರು.

ಉತ್ಥಾನ ಕಾರ್ಯಕ್ರಮದಲ್ಲಿ 25ಕ್ಕೂ ಹೆಚ್ಚು ಪದವಿ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಗಾಯನ, ನೃತ್ಯ, ಫ್ಯಾಷನ್ ಶೋ, ಬೆಸ್ಟ್ ಮ್ಯಾನೇಜರ್, ಕಿರು ಚಿತ್ರ, ರಸಪ್ರಶ್ನೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತನ್ನು ಡಾ. ನಾ. ಸೋಮೇಶ್ವರ ಅವರು ನಡೆಸಿಕೊಟ್ಟರು.




ಶಿವಮೊಗ್ಗ ಜೆಎನ್ಎನ್‌ಸಿಇ ಎಂಬಿಎ ವಿಭಾಗದ ಆವರಣದಲ್ಲಿ ಶುಕ್ರವಾರ ಉತ್ಥಾನ 2019 ರಾಜ್ಯ ಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವವನ್ನು ವೈದ್ಯ ಸಾಹಿತಿ ಡಾ. ನಾ. ಸೋಮೇಶ್ವರ ಅವರು ಉದ್ಘಾಟಿಸಿದರು. ಎನ್ಇಎಸ್ ಕಾರ್ಯದರ್ಶಿ ಎಸ್.ಎನ್.ನಾಗರಾಜ್, ಮಹದೇವಸ್ವಾಮಿ ಇದ್ದರು.

**A State level Management and Cultural Fest Uttana-2019**

ವಿಜಯ ಕರ್ನಾಟಕ ಮಂಗಳವಾರ, 19 ಮಾರ್ಚ್ 2019,

## ಜೆಎನ್‌ಎನ್‌ಸಿಇಯಲ್ಲಿ ಮಹಿಳಾ ದಿನಾಚರಣೆ




ಶಿವಮೊಗ್ಗದ ಜೆಎನ್ಎನ್‌ಸಿಇ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ರಕ್ಷಾರಾವ್, ಪ್ರಾಚಾರ್ಯ ಡಾ. ಎಚ್.ಆರ್.ಮಹಾದೇವಸ್ವಾಮಿ ಇತರರಿದ್ದರು.

ಜನ ಹೋರಾಟ ಗುರುವಾರ 21, ಮಾರ್ಚ್ 2019

## ಒಂದು ದಿನದ ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮ



ಶಿವಮೊಗ್ಗ : ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಇನ್‌ಸ್ಟಿಟ್ಯೂಷನ್ ಆಫ್ ಎಲೆಕ್ಟ್ರಾನಿಕ್ಸ್ ಅಂಡ್ ಟೆಲಿಕಮ್ಯುನಿಕೇಷನ್ ಇಂಜಿನಿಯರ್ಸ್ , ಶಿವಮೊಗ್ಗ ಕೇಂದ್ರ ಹಾಗು ಜವಾಹರಲಾಲ್ ನೆಹರು ರಾಷ್ಟ್ರೀಯ ತಾಂತ್ರಿಕ ಮಹಾ ವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ವಿಶೇಷವಾಗಿ ಮಹಿಳೆಯರಿಗಾಗಿ ಸ್ವಸ್ಥ್ ಭಾರತ್ ಯೋಜನೆ ಅಡಿಯಲ್ಲಿ ಒಂದು ದಿನದ ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಸಂಪನ್ಮೂಲವ್ಯಕ್ತಿಗಳಾದ ಡಾ|| ಪುರುಶೋತ್ತಮ್ ಇಂಡೋ-ವಿಷ್ಯಾ ಕ್ಯಾನ್ಸರ್ ನಿಯಂತ್ರಣ ವಿಭಾಗದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ರದೀಪ, , ಪ್ರಾಂಶುಪಾಲ ಡಾ|| ಹೆಚ್. ಆರ್. ಮಹಾದೇವಸ್ವಾಮಿ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥ ಡಾ|| ಮಂಜುನಾಥ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**Women's Day Celebration - 2019**
**18.03.2019**




ಶಿವಮೊಗ್ಗದ ಜೆಎನ್ಎನ್ ಇಂಜಿನಿಯರ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಾಗೃತಿ. ಯಾತ್ರಾ ರೈಲು ಪ್ರವಾಸದ ಅನುಭವ ಹಂಚಿಕೆ ಹಾಗೂ ಸಸ್ಟೇನಬಲ್ ಎಂಟರ್‌ಪ್ರೈಸ್ ಅವಾರ್ಡ್ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಜಂಟಿ ಕಾರ್ಯದರ್ಶಿ ವಿಶ್ವೇಶ್ವರಯ್ಯ ಉದ್ಘಾಟಿಸಿದರು.

1ಏಪ್ರಿಲ್, 2019, ಸಂಯುಕ್ತ ಕರ್ನಾಟಕ ಸೋಮವಾರ

## ಕೈಗಾರಿಕೆಗಳ ಅಭಿವೃದ್ಧಿಗೆ ಆದ್ಯತೆ

ಸಂ.ಕ.ಸಮಾಚಾರ ಶಿವಮೊಗ್ಗ

ಭಾರತವು ಕೃಷಿ ಪ್ರಧಾನ ದೇಶವಾಗಿದ್ದರೂ ಕೈಗಾರಿಕೆಗಳ ಅಭಿವೃದ್ಧಿಗೂ ಸಹ ಆದ್ಯತೆ ನೀಡಲಾಗಿದೆ. ಯುವಕರು ಹೆಚ್ಚು ಹೆಚ್ಚಾಗಿ ಕೈಗಾರಿಕೋದ್ಯಮದಲ್ಲಿ ತೊಡಗಿಸಿಕೊಳ್ಳಬೇಕು. ಕೈಗಾರಿಕೆಗಳ ಪ್ರಗತಿಯಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಜಂಟಿ ಕಾರ್ಯದರ್ಶಿ, ಉದ್ಯಮಿ ವಿಶ್ವೇಶ್ವರಯ್ಯ ಹೇಳಿದರು.

ಮುಂಬೈನ ಜಾಗೃತಿ ಸೇವಾ ಸಂಸ್ಥೆಯು ಇಲ್ಲಿನ ಜೆಎನ್ಎನ್ ಇಂಜಿನಿಯರ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಯಾತ್ರಾ ರೈಲು ಪ್ರವಾಸದ ಅನುಭವ ಹಂಚಿಕೆ ಹಾಗೂ ಸಸ್ಟೇನಬಲ್ ಎಂಟರ್‌ಪ್ರೈಸ್ ಅವಾರ್ಡ್ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇಶದ ಆರ್ಥಿಕ ವ್ಯವಸ್ಥೆ ಸುಧಾರಣೆಯಲ್ಲಿ ಕೈಗಾರಿಕೋದ್ಯಮದ ಪಾತ್ರ ಮಹತ್ವದಾಗಿದೆ. ದೇಶ ಆರ್ಥಿಕವಾಗಿ ಸಬಲವಾಗಲು ಕೈಗಾರಿಕೆಗಳು ಅಗತ್ಯ. ಆದರೆ ಕೈಗಾರಿಕೆಗಳಿಂದ ಪರಿಸರ ನಾಶವಾಗುತ್ತದೆ ಎಂಬ ಆಪಾದನೆ ಇದೆ. ಇದನ್ನು ಹೋಗಲಾಡಿಸಲು ಪರಿಸರಕ್ಕೆ ಪೂರಕವಾದ ಕೈಗಾರಿಗಳನ್ನು ಸ್ಥಾಪಿಸಬೇಕು ಎಂದರು.

ಎಲ್ಲಾ ಉದ್ಯಮಗಳಂತೆ ಕೈಗಾರಿಕೋದ್ಯಮದಲ್ಲೂ ಸಹ ಸಾಕಷ್ಟು ಪೈಪೋಟಿ ಇದೆ. ಉತ್ತಮ ಗುಣಮಟ್ಟ, ಗ್ರಾಹಕರ ವಿಶ್ವಾಸ ಸಂಪಾದನೆ ಮೂಲಕ ಪೈಪೋಟಿ ನಡುವೆಯೂ ಯಶಸ್ಸು ಸಾಧಿಸಬಹುದು. ಯುವಕರು ಉದ್ಯೋಗವನ್ನು ಹುಡುಕಿಕೊಂಡು ಹೋಗುವ ಬದಲು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಸಣ್ಣ-ಪುಟ್ಟ ಉದ್ಯಮ ಆರಂಭಿಸುವ ಮೂಲಕ ಉದ್ಯೋಗದಾತರಾಗಬೇಕು. ಸಣ್ಣ-ಪುಟ್ಟ ಉದ್ಯಮಗಳೇ ಮುಂದೊಂದು ದಿನ ಬೃಹದಾಕಾರದಲ್ಲಿ ಬೆಳೆಯಲಿದೆ ಎಂದರು.

ಜಾಗೃತಿ ಯಾತ್ರಾದ ವ್ಯವಸ್ಥಾಪಕರಾದ ಅಮಿತ್ ಕಲುಕೆ ಮಾತನಾಡಿ 20 ವರ್ಷ ತುಂಬಿದ ಯುವಜನರು ಉದ್ಯಮಶೀಲತೆಯಿಂದ ದೇಶ ಕಟ್ಟುವ ಜಾಗೃತಿ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕು. ಜಾಗೃತಿ ಯಾತ್ರೆಯ ರೈಲು ಯಾತ್ರೆಯು ದೇಶಾದ್ಯಂತ 15 ದಿನಗಳಲ್ಲಿ 8 ಸಾವಿರ ಕಿ.ಮೀ. ಸಂಚರಿಸಿದೆ. ಯುವ ಉದ್ಯಮಿಗಳೊಂದಿಗೆ ಪ್ರಯಾಣ ಬೆಳಸಿ "ದೇಶವನ್ನು ಉದ್ಯಮಿಗಳಿಂದ ಕಟ್ಟೋಣ" ಎಂಬ ಧ್ಯೇಯವಾಕ್ಯದೊಂದಿಗೆ ಜಾಗೃತಿ ಯಾತ್ರೆಯನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಜಾಗೃತಿ ಯಾತ್ರಾದ ಜಿಲ್ಲಾ ರಾಯಭಾರಿ ಎಸ್.ವಿ.ಸಂತೋಷ್ ಕುಮಾರ್, ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಜೆ.ಆರ್. ವಾಸುದೇವ್, ಉದ್ಯಮಿ ಅಶ್ವತ್ಥ ನಾರಾಯಣ ಶೆಟ್ಟಿ, ಎನ್ಇಎಸ್ ನಿರ್ದೇಶಕ ಶಿವಕುಮಾರ್, ಪ್ರಾಂಶುಪಾಲ ಮಹಾದೇವ ಸ್ವಾಮಿ, ಯೋಜನಾ ವ್ಯವಸ್ಥಾಪಕ ಮಲ್ಲೇಶ್ ಕುಮಾರ್ ಉಪಸ್ಥಿತರಿದ್ದರು.

**Awareness Programme on Jagriti Yatra & Sustainable Enterprise Award**
**30.3.2019**

## ‘ದೇಶದ ಭವಿಷ್ಯ ಬದಲಿಸುವ ಎಂಜಿನಿಯರ್‌ಗಳು’

ಪ್ರಜಾವಾಣಿ ವಾರ್ತೆ



ಶಿವಮೊಗ್ಗದ ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಬೆಂಗಳೂರಿನ ಗ್ಲೋಬಲ್ ಎಜ್ ಸಾಫ್ಟ್‌ವೇರ್ ಕಂಪನಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ನಾಗನಗೌಡ ಜಕ್ಕನಗೌಡರ್ ಮಾತನಾಡಿದರು

ಶಿವಮೊಗ್ಗ: ಯುವ ಎಂಜಿನಿಯರ್‌ಗಳು ದೇಶದ ಭವಿಷ್ಯ ಬದಲಿಸುವಂತಹ ಹೊಸ ಹೊಸ ಆವಿಷ್ಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಬೆಂಗಳೂರಿನ ಗ್ಲೋಬಲ್ ಎಜ್ ಸಾಫ್ಟ್‌ವೇರ್ ಕಂಪನಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ನಾಗನಗೌಡ ಜಕ್ಕನಗೌಡರ್ ಸಲಹೆ ನೀಡಿದರು.

ಜವಾಹರ್ ಲಾಲ್ ನೆಹರೂ ರಾಷ್ಟ್ರೀಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಭವಿಷ್ಯದಲ್ಲಿ ‘ಸೂಪರ್ ಪವರ್ ಭಾರತ’ ಅಭಿವೃದ್ಧಿ ಪಡಿಸುವ ಗುರಿ ಹೊಂದಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ ಈಗಾಗಲೇ ದೇಶದ ಚಿತ್ರಣವನ್ನೇ ಬದಲಿಸುತ್ತಿದೆ. ಈ ಕಾರ್ಯದಲ್ಲಿ ಯುವಕರೂ ಕೈಜೋಡಿಸಬೇಕು. ಹೊಸ ಸಂಶೋಧನೆಗಳ ಮೂಲಕ ದೇಶದ ಬಲಿಷ್ಠಗೊಳಿಸಲು ಅಗತ್ಯ ಸಹಕಾರ ನೀಡಬೇಕು ಎಂದು ಕೋರಿದರು.

‘ಭಾರತದ ವಿದ್ಯಾರ್ಥಿಗಳು ಸಾಕಷ್ಟು ಪ್ರತಿಭಾವಂತರು. ವಿದೇಶದಲ್ಲಿ ಬೇಡಿಕೆ ಇದೆ. ಅಲ್ಲಿ ಒಳ್ಳೆಯ ವೇತನ ಸಿಗುತ್ತದೆ ಎನ್ನುವ ಒಂದೇ ಕಾರಣಕ್ಕೆ ಪ್ರತಿಭಾ ಪಲಾಯನ ಮಾಡಬಾರದು. ಪ್ರತಿಭೆ ದೇಶದ ಅಭಿವೃದ್ಧಿಗೆ ಬಳಕೆಯಾಗಬೇಕು’ ಎಂದರು.

ಈ ಸಮಯದಲ್ಲಿ ಬಿಇ, ಎಂಟೆಕ್, ಎಂಬಿಎ ಮತ್ತು ಎಂಸಿಎಯಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಅನಂತರ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಜೆಎನ್‌ಎನ್‌ಸಿಇ ಎಕ್ಸಲೆಂಟ್ ಪ್ರಶಸ್ತಿಯನ್ನು ದಿವ್ಯಾ ಶೆಟ್ಟಿ ಮತ್ತು ಜಾಯ್ ಕಿರಣ್ ಅವರಿಗೆ, ಯುವ ಉದ್ಯಮಿ ಮತ್ತು ಯುವ ಸಂಶೋಧಕ ಪ್ರಶಸ್ತಿಯನ್ನು ಕೌಶಿಕ್ ಆರ್. ಉಡುಪ ಮತ್ತು ದೀಪಕ್ ದೊಡ್ಡಮನಿ ಅವರಿಗೆ, ಮೊಹಮ್ಮದ್ ದಾದಾಪಿರ್ ಮತ್ತು ಎಮ್.ಜಿ. ಪೂರ್ಣಿಮಾ ಅವರಿಗೆ ಕಲಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗಣಿತ ವಿಷಯದಲ್ಲಿ 400ಕ್ಕೆ 400 ಅಂಕ ಪಡೆದ ಕೆ.ಆರ್. ರೋಹನ್ ಮತ್ತು 397 ಅಂಕ ಪಡೆದ ಎಚ್.ಪಿ. ವಿದ್ಯಾಶ್ರೀ, ಕ್ರೀಡೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಸಲೀಮ್ ಶೇಖ್ ಅವರನ್ನು ಗೌರವಿಸಲಾಯಿತು.

ಎನ್‌ಇಎಸ್ ಅಧ್ಯಕ್ಷ ಎ.ಎಸ್. ವಿಶ್ವನಾಥ, ಉಪಾಧ್ಯಕ್ಷ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ, ಕಾರ್ಯದರ್ಶಿ ಎಸ್.ಎನ್. ನಾಗರಾಜ್, ಖಜಾಂಚಿ ಸಿ.ಆರ್. ನಾಗರಾಜ್, ಎನ್‌ಇಎಸ್ ಕುಲಸಚಿವ ಪ್ರೊ.ಹೂವಯ್ಯಗೌಡ ಉಪಸ್ಥಿತರಿದ್ದರು. ಪ್ರಾಂಶುಪಾಲ ಪ್ರೊ. ಎಚ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

DECCAN HERALD Thursday, May 16, 2019

## Engg asked to make innovations that change country's prospects

SHIVAMOGGA: Young engineers should engage in new innovations that can change the country's prospects, said Bengaluru's Global Age Software Company Human Resource Department chairman Naganagouda Jakkanagoudar.

He was speaking at the Graduation Day ceremony at Jawaharlal Nehru National Engineering College here on Wednesday.

There is an aim to make India a superpower in future. The progress in science and technology has already changed the scenario of the nation.

The youths too should join hands in this. They should strengthen the nation by taking up new research, he said.

The youths of India are very talented. They have a huge de-



Bengaluru's Global Age Software Company Human Resource Department chairman Naganagouda Jakkanagoudar speaks at the Graduation Day ceremony at Jawaharlal Nehru National Engineering College in Shivamogga on Wednesday. DH PHOTO

**Graduands Day-2019 15.05.2019**

ಸಂಯುಕ್ತ ಕರ್ನಾಟಕ
6, ಏಪ್ರಿಲ್ 2019, ಶನಿವಾರ

## ನವೀಕರಿಸಬಹುದಾದ ಇಂಧನ ಮೂಲ ಬಳಸಿ ತಾಪಮಾನ ನಿಯಂತ್ರಿಸಿ

ಸಂ.ಕ. ಸಮಾಚಾರ ಶಿವಮೊಗ್ಗ

ನವೀಕರಿಸಬಹುದಾದ ಇಂಧನ ಮೂಲಗಳನ್ನು ಬಳಸುವ ಮೂಲಕ ಜಾಗತಿಕ ತಾಪಮಾನ ನಿಯಂತ್ರಿಸಬಹುದು ಎಂದು ರಾಜ್ಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಇಲಾಖೆಯ ಯೋಜನಾ ನಿರ್ದೇಶಕ ಡಿ.ಕೆ. ದಿನೇಶ್ ಕುಮಾರ್ ಅಭಿಪ್ರಾಯಪಟ್ಟರು.

ಜೆಎನ್‌ಎನ್‌ಸಿಇ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಇಂಧನ ಕ್ಷಮತೆ ಮತ್ತು ಉಳಿತಾಯ ಕುರಿತಾದ ಒಂದು ದಿನದ ಜಾಗೃತಿ ಕಾರ್ಯಾಗಾರ ಮತ್ತು ಚರ್ಚಾ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನವೀಕರಿಸಬಹುದಾದ ಇಂಧನ ಮೂಲಗಳನ್ನು ಬಳಸುವ ಮೂಲಕ ಭೂ ಮಂಡಲವನ್ನು ರಕ್ಷಿಸಬೇಕು ಎಂದರು.

ಕಿರು ಜಲ, ಪವನ, ಜೀವರಾಶಿ ಮತ್ತು ಸಕ್ಕರೆ ಕಾರ್ಖಾನೆಗಳಲ್ಲಿನ ಸಹ ಉತ್ಪನ್ನ ಘನ ತ್ಯಾಜ್ಯ ಮತ್ತು ಸೌರಶಕ್ತಿಯಂತಹ ನವೀಕರಿಸಬಹುದಾದ ಇಂಧನ ಮೂಲಗಳನ್ನು ಅಭಿವೃದ್ಧಿಪಡಿಸುವುದು ಇಂದಿನ ಅಗತ್ಯವಾಗಿದೆ. ಈ ಅಭಿವೃದ್ಧಿಯಲ್ಲಿ ಖಾಸಗಿ ಉದ್ಯಮಿಗಳಿಗೆ ತಮ್ಮ ಇಲಾಖೆ ನೆರವು ನೀಡುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲಿ ವಿದ್ಯುತ್ ಉಳಿತಾಯ ಮತ್ತು ಸಂರಕ್ಷಣೆ ಕಾರ್ಯಗಳನ್ನು ಉತ್ತೇಜಿಸಲು ಹಲವಾರು ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ವಿದ್ಯುತ್ ಸಂರಕ್ಷಣೆ ತಂತ್ರ ಮತ್ತು ಮಾರ್ಗೋಪಾಯಗಳ ಬಗ್ಗೆ ಕುಟುಂಬದ ಸದಸ್ಯರಿಗೆ ಹಾಗೂ ನೆರೆಹೊರೆಯವರಿಗೆ ಜಾಗೃತಿ ಮೂಡಿಸಬೇಕು ಎಂದು ಮನವಿ ಮಾಡಿದರು.

ಕೈಗಾರಿಕಾ ಘಟಕಗಳಿಂದ ಬಿಡುಗಡೆಯಾಗುವ ಹಸಿರುಮನೆ ಅನಿಲಗಳಿಂದ ಭೂಮಿಯ ಮೇಲಿನ ಉಷ್ಣತೆ ಹೆಚ್ಚುತ್ತಿದೆ. ಜಾಗತಿಕ ತಾಪಮಾನಕ್ಕೆ ಇದು ಕಾರಣವಾಗುತ್ತಿದೆ. ಇದರಿಂದ ಪ್ರಕೃತಿ ವಿಕೋಪ ಹೆಚ್ಚುತ್ತಿದೆ. ಹೆಚ್ಚು ಶಾಖದಿಂದ ನೀರ್ಗಲ್ಲುಗಳು ಕರಗುತ್ತಿವೆ. ಈಗಿರುವ ತಾಪಮಾನಕ್ಕಿಂತ ಹೆಚ್ಚಿನ ತಾಪಮಾನಕ್ಕೇರಲು ಅವಕಾಶ ಕೊಡಬಾರದೆಂದು ಹೇಳಿದರು.

ಮೈಸೂರಿನ ರಚನಾ ಎನರ್‌ಕೇರ್ ಸಂಸ್ಥೆಯ ನಿರ್ದೇಶಕ ಅನಿಲ್‌ಕುಮಾರ್ ಮಾತನಾಡಿ, ಇಂಧನ ಸಂರಕ್ಷಣೆ, ಇಂಧನ ಉಳಿತಾಯ, ವಸ್ತುಗಳ ಮರುಬಳಕೆಗೆ ಉತ್ತೇಜನ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಾದ ಸೋಲಾರ್, ಗಾಳಿ, ಕಿರು ಜಲವಿದ್ಯುತ್ ಮತ್ತು ಜೈವಿಕ ಇಂಧನಗಳನ್ನು ಬಳಸುವ ಮೂಲಕ ಹಸಿರುಮನೆ ಅನಿಲಗಳನ್ನು ನಿಯಂತ್ರಿಸಬಹುದು. ಇವುಗಳ ಬಳಕೆಯಿಂದ ಶಾಖವನ್ನು ನಿಯಂತ್ರಿಸುವುದರ ಜೊತೆಗೆ ಪ್ರಾಣಿ ಸಂಕುಲದ ಆರೋಗ್ಯದ ಮೇಲಾಗುವ ಪರಿಣಾಮವನ್ನೂ ಸಹ ನಿಯಂತ್ರಿಸಬಹುದು ಎಂದರು.

ಜೆಎನ್‌ಎನ್‌ಸಿಇ ಕಾಲೇಜಿನ ಪ್ರಾಚಾರ್ಯ ಎಚ್.ಆರ್. ಮಹದೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಜೆಎನ್‌ಎನ್‌ಸಿಇ ಉಪಪ್ರಾಚಾರ್ಯ ಎಲ್.ಕೆ. ಶ್ರೀಪತಿ, ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಪ್ರೊ. ಸುರೇಂದ್ರ, ಕೈಗಾರಿಕೆ ಮತ್ತು ಉದ್ಯಮಶೀಲ ಕೇಂದ್ರದ ಯೋಜನಾ ವ್ಯವಸ್ಥಾಪಕ ಕೆ.ಎಸ್. ಮಲ್ಲೇಶ್‌ಕುಮಾರ್ ಮಾತನಾಡಿದರು.



**Awareness Programme & Debate on Energy Efficiency & Conservation 05.04.2019**

ವಿಜಯವಾಣಿ
ಭಾನುವಾರ 19 ಮೇ 2019

### ಜೆಎನ್‌ಎನ್‌ಸಿಇ ನೆನಪಿನ ಅಂಗಳದಲ್ಲಿ ಡಾ. ಎಂ.ಎಚ್.ಬಾಲಸುಬ್ರಹ್ಮಣ್ಯ ಬೇಸರ

## ಹಕ್ಕುಸ್ವಾಮ್ಯ ಪಡೆಯುವಲ್ಲಿ ಭಾರತ ಹಿಂದೆ

ಶಿವಮೊಗ್ಗ: ಸಂಶೋಧನೆಗೆ ಹಕ್ಕುಸ್ವಾಮ್ಯತೆ ಪಡೆದುಯುವಲ್ಲಿ ಭಾರತ ಹಿಂದುಳಿದಿದೆ ಎಂದು ಐಐಎಸ್‌ಸಿ ಪ್ರಾಧ್ಯಾಪಕ ಡಾ. ಎಂ.ಎಚ್.ಬಾಲಸುಬ್ರಹ್ಮಣ್ಯ ಹೇಳಿದರು.

ನಗರದ ಜೆಎನ್‌ಎನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಗ್ಲೋಬಲ್ ಅಲೂಮ್ನಿ ಮೀಟ್ ‘ನೆನಪಿನ ಅಂಗಳ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂಶೋಧನಾ ಪ್ರಬಂಧ, ಲೇಖನಗಳು ಪ್ರಕಟಗೊಳ್ಳುವ ಜತೆಯಲ್ಲಿ ಕ್ರಿಯಾತ್ಮಕ ಆಲೋಚನೆಗಳಿಂದ ಕಾರ್ಯರೂಪಕ್ಕೆ ಬರಬೇಕು. ಸಂಶೋಧನೆಗಳ ಹಕ್ಕುಸ್ವಾಮ್ಯತೆ ಪಡೆದುಕೊಳ್ಳುವ ಪ್ರಕ್ರಿಯೆ ಹೆಚ್ಚಾಗಬೇಕು ಎಂದು ತಿಳಿಸಿದರು.

ಶೈಕ್ಷಣಿಕ ಸಂಸ್ಥೆಗಳಿಂದ ಹೆಚ್ಚಿನ ಸಂಶೋಧನೆಗಳು ಪ್ರಕಟಣೆಗೊಳ್ಳುವುದರಿಂದ ಕೈಗಾರಿಕೆ ಮತ್ತು ಉತ್ಪಾದನಾ ಸಂಸ್ಥೆಗಳ ನಡುವೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶನಕ್ಕೆ ವೇದಿಕೆ ಸಿಗುತ್ತದೆ. ಹೊಸ ಚಿಂತನೆಗಳು ಉದ್ಯಮದ ರೂಪ ಪಡೆಯಲು ಸಂಸ್ಥೆಯ ಸಂಶೋಧನಾ ಕೊಡುಗೆ ಕಾರಣ ಆಗುತ್ತದೆ ಎಂದರು.

ಹಳೇ ವಿದ್ಯಾರ್ಥಿಗಳ ಒಟ್ಟುಗೂಡುವಿಕೆಯಿಂದ ಕಾಲೇಜಿನ ಮೂಲ ಸೌಕರ್ಯಗಳಿಗೆ ನೆರವು, ಆಯಾ ಕ್ಷೇತ್ರದಲ್ಲಿ ಆಗಬೇಕಿರುವ ಆಧುನಿಕ ಬದಲಾವಣೆಗಳ ಬಗ್ಗೆ ಚಿಂತನೆ, ಆಲೋಚನೆ ಮಾಡಲು ಸಾಧ್ಯವಾಗುತ್ತದೆ. ಪ್ರಸ್ತುತ ಕಾಲೇಜಿನ ವಿದ್ಯಾರ್ಥಿಗಳಿಗೆ ಉದ್ಯೋಗ ಕ್ಷೇತ್ರದಲ್ಲಿರುವ ಸವಾಲುಗಳ ಬಗ್ಗೆ ಮಾರ್ಗದರ್ಶನ ಮಾಡಲು ಅವಶ್ಯವಿರುವ ಆಲೋಚನೆಗಳ ಬಗ್ಗೆ ಚರ್ಚಿಸಬಹುದಾಗಿದೆ ಎಂದರು.

ಹಳೇ ವಿದ್ಯಾರ್ಥಿಗಳ ಔದ್ಯೋಗಿಕ ಕ್ಷೇತ್ರಗಳ ಅನುಭವ, ಆಧುನಿಕ ತಂತ್ರಜ್ಞಾನದ ಅರಿವು, ಸಂಶೋಧನೆ ಪರಿಣಾಮ, ಶಿಕ್ಷಣದ ಜತೆ ಉದ್ಯೋಗ ಕೌಶಲ್ಯಗಳ ಬಗ್ಗೆ ತರಬೇತಿ ಮತ್ತಿತರ ವಿಷಯಗಳ ಬಗ್ಗೆ ಚರ್ಚಿಸಿದಾಗ ಶಿಕ್ಷಣ ಸಂಸ್ಥೆಯು ತರಬೇಕಿರುವ ಬದಲಾವಣೆಗಳ ಅರಿವಾಗುತ್ತದೆ. ಶೈಕ್ಷಣಿಕ ಸಂಸ್ಥೆ ಗುಣಮಟ್ಟ ಹೆಚ್ಚಿಸಲು ಅನುಕೂಲ ಆಗುತ್ತದೆ. ಜೆಎನ್‌ಎನ್‌ಸಿಇ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ, ಆವಿಷ್ಕಾರ ಹಾಗೂ ಸಂಶೋಧನೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ಕೊಡುಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಸಂಸ್ಥೆ ಸಾಧನೆಗೆ ಕಾರಣ ಆಗುತ್ತದೆ ಎಂದರು. ಜೆಎನ್‌ಎನ್‌ಸಿಇ ಪ್ರಾಚಾರ್ಯ ಡಾ. ಎಚ್.ಆರ್.ಮಹಾದೇವಸ್ವಾಮಿ ಮಾತನಾಡಿದರು. ಎನ್‌ಇಎಸ್ ಅಧ್ಯಕ್ಷ ಎ.ಎಸ್.ವಿಶ್ವನಾಥ್, ಉಪಾಧ್ಯಕ್ಷ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ, ಕಾರ್ಯದರ್ಶಿ ಎಸ್.ಎನ್.ನಾಗರಾಜ್, ಡಾ. ಎಸ್. ಸುರೇಂದ್ರ, ಇರ್ಫಾನ್ ಖಾನ್, ಉಜ್ವಲಾ ಉಪಸ್ಥಿತರಿದ್ದರು.



ನೆನಪಿನ ಅಂಗಳ ಕಾರ್ಯಕ್ರಮದಲ್ಲಿ ಡಾ. ಎಂ.ಎಚ್.ಬಾಲಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು. ಡಾ. ಎಚ್.ಆರ್.ಮಹಾದೇವಸ್ವಾಮಿ, ಟಿ.ಆರ್. ಅಶತನಾರಾಯಣ ಶೆಟಿ. ಎ.ಎಸ್.ವಿಶನಾಥ್. ಎಸ್.ಎನ್.ನಾಗರಾಜ್ ಇದರು.

**Nenapina Angala-2019 Global Alumni Meet 18.05.2019**


ವಿಜಯವಾಣಿ ಸೋಮವಾರ 29 ಏಪ್ರಿಲ್ 2019

ಆಯಾ ಕ್ಷೇತ್ರದಲ್ಲಿ ಉನ್ನತ ಸಾಧನೆಗೆ ನೆರವು | ಎಎಐ ನಿರ್ದೇಶಕ ಆರ್.ಮಂಜುನಾಥ್ ಸಲಹೆ

**ವಿಷಯದ ಮೂಲ ಅಂಶಗಳ ತಿಳಿವಳಿಕೆ ಅಗತ್ಯ**

ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ

ವೃತ್ತಿ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ವಿಷಯದ ಮೂಲ ಅಂಶಗಳ ತಿಳಿವಳಿಕೆ ಅಗತ್ಯ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ)ದ ಮೈಸೂರು ವಿಭಾಗೀಯ ನಿರ್ದೇಶಕ ಆರ್.ಮಂಜುನಾಥ್ ಹೇಳಿದರು.

ಜೆಎನ್‌ಎನ್‌ಇ ಕಾಲೇಜಿನಲ್ಲಿ ಆಯೋಜಿಸಿದ್ದ 'ಟೆಕ್‌ಝೋನ್-2019' ತಾಂತ್ರಿಕ ಸಮ್ಮೇಳನದ ...

» ವಿಮಾನ ನಿಲ್ದಾಣ ನಿರ್ಮಾಣಕ್ಕೆ ಎಲ್ಲ ವಿಭಾಗಗಳ ಸಹಕಾರ ಅಗತ್ಯ


ವಿಜಯ ಕರ್ನಾಟಕ ಶನಿವಾರ, 27 ಏಪ್ರಿಲ್ 2019, ಶಿವಮೊಗ್ಗ

ಮೂರು ದಿನಗಳ ಟೆಕ್ ಝೋನ್-2019 ಉದ್ಘಾಟನೆ

**ವಿದ್ಯಾರ್ಥಿಗಳು ಹೊಸತನದೊಂದಿಗೆ ಅವಕಾಶ ಬಳಸಿಕೊಳ್ಳಿ**

ಎಂಜಿನಿಯರ್ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ಟೆಕ್ ಝೋನ್-2019 ಸ್ಪರ್ಧೆಯಲ್ಲಿ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಒಟ್ಟು 28 ಸ್ಪರ್ಧೆಗಳು ನಡೆಯಲಿವೆ. ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶ ಸೇರಿದಂತೆ ಇತರೆ ಭಾಗದಿಂದ ಸುಮಾರು 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿ, ಸ್ವರಚಿತ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿ...

TECHZONE-2019 26TH APRIL TO 28TH APRIL 2019


ಪ್ರಜಾವಾಣಿ ಗುರುವಾರ • ಮೇ 2, 2019

'ಅವಳ ಹೆಜ್ಜೆ' ಸಂಸ್ಥೆಯ ಸಂಸ್ಥಾಪಕಿ ಶಾಂತಲಾ ದಾಮ್ಲೆ ಬೇಸರ

**ವೃತ್ತಿ ಜೀವನದಲ್ಲಿ ಯುವತಿಯರಿಗೆ ಹಿನ್ನಡೆ**

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಎರಡು ದಶಕಗಳ ಅವಧಿಯಲ್ಲಿ ಯುವತಿಯರೇ ಹೆಚ್ಚಾಗಿ ಎಂಜಿನಿಯರಿಂಗ್ ಪದವಿ ಪಡೆಯುತ್ತಿದ್ದರೂ ವೃತ್ತಿ ಜೀವನದಲ್ಲಿ ಮಾತ್ರ ಅವರು ಹಿನ್ನಡೆಯಲಿದ್ದಾರೆ ಎಂದು 'ಅವಳ ...


ವಿಜಯ ಕರ್ನಾಟಕ ಮಂಗಳವಾರ, 30 ಏಪ್ರಿಲ್ 2019

**ಮಹಿಳೆ ಅಡೆತಡೆ ಮೆಟ್ಟಿ ನಿಲ್ಲಲಿ**

ONE DAY NATIONAL LEVEL WORKSHOP ON WOMEN EMPOWERMENT IN HIGHER EDUCATION
29TH APRIL 2019


ವಿಜಯ ಕರ್ನಾಟಕ ಬುಧವಾರ,10 ಜುಲೈ 2019,

ಜೆಎನ್‌ಎನ್‌ಸಿಇಯಲ್ಲಿ ಅಧ್ಯಾಪಕರಿಗಾಗಿ ಪುನಶ್ಚೇತನ ಕಾರ್ಯಾಗಾರ

**ಗುಣಮಟ್ಟದ ತರಬೇತಿ ಪರಿಣಾಮಕಾರಿ**

ವಿಕ ಸುದ್ದಿಲೋಕ ಶಿವಮೊಗ್ಗ

ಶಿಕ್ಷಣ ತನ್ನ ಮೂಲ ಉದ್ದೇಶ ಈಡೇರಿಸುವಲ್ಲಿ ವಿಫಲವಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯ ಪ್ರಭಾರ ಕುಲಪತಿ ಪ್ರೊ.ಎಸ್.ಎಸ್.ಪಾಟೀಲ್ ಕಳವಳ ವ್ಯಕ್ತಪಡಿಸಿದರು.

ನಗರದ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಎಂಬಿಎ ...

ONE WEEK SKILL DEVELOPMENT PROGRAMME FOR TECHNICAL & SUPPORTING STAFF 8-12 JULY 2019


ಜನ ಹೋರಾಟ ಮಂಗಳವಾರ 09, ಜುಲೈ 2019

ಶಿಕ್ಷಣ ಸಮಾಜದ ಅಭಿವೃದ್ಧಿಗೆ ಪೂರಕವಾಗಿರಬೇಕು


DECCAN HERALD Tuesday, July 9, 2019

**Education is for overall devpt of society, says V-C**

'Focus on providing quality education'

**SHIVAMOGGA: Kuvempu University Vice-Chancellor (in-charge) S S Patil has opined that the main objective of education is the overall development of the people, and society.**

He noted this while speaking after inaugurating the two-week faculty development programme on 'Paradigm Shift in Higher Education Teaching Vision-2030', and a one-week skill development programme for the supporting technical staff organised by Department of Management Studies at MCA/MBA auditorium at the Jawaharlal Nehru National College of Engineering (JNNCE) campus here on Monday.

He said, education is for knowledge, job, life, and personality development. Education is based on these four factors. When it is provided on the basis of these four factors, the purpose of education will be served. "Our education system is based on these four points since the ancient period," he noted.

He, however, regretted that education has failed to serve these purposes for many reasons. So, the country is framing a new education policy. There is a need to debate the factors that must become part of the new education policy, he added.

Speaking on the occasion, Nijalingappa College, Bengaluru, retired principal R C Hiremath said, educational institutes must focus on providing quality education to students in the current competitive era for their survival. They must conduct training programmes for teaching and non-teaching staff on a regular basis. This is need of the hour, he added.

National Education Society President A S Vishwanath, Vice-President T R Ashwath Narayana Setty, Secretary S N Nagaraj, Treasurer C Nagaraj, JNNCE Principal Mahadevaswamy, and others were present on the occasion.

DH News Service

Kuvempu University Vice-Chancellor (in-charge) S S Patil inaugurates the two-week faculty development programme on 'Paradigm Hhift in Higher education Teaching Vision-2030', and a one-week skill development programme for supporting technical staff in Shivamogga on Monday. DH PHOTO

**TWO WEEK FACULTY DEVELOPMENT PROGRAMME ON PARADIGM SHIFT IN HIGHER EDUCATION TEACHING : VISION 2030 8-19 JULY 2019**


ಬುಧವಾರ ಜುಲೈ 24, 2019

ನೌಕರರು ವೃತ್ತಿಪರರಾದಾಗ ಮಾತ್ರ ಗುಣಮಟ್ಟದ ಸೇವೆಯನ್ನು ನೀಡಲು ಸಾಧ್ಯ: ಎಸ್ ಎನ್ ನಾಗರಾಜ್


ವಿಜಯ ಕರ್ನಾಟಕ ಗುರುವಾರ, 25 ಜುಲೈ 2019

ವೃತ್ತಿ ನೈಪುಣ್ಯತೆಯಿಂದ ಗುಣಮಟ್ಟದ ಸೇವೆ

**SKILL DEVELOPMENT PROGRAMME FOR HOSTEL & TRANSPORT STAFF 24-26 JULY 2019**


ವಿಜಯವಾಣಿ

ಶೇ.100 ಮತದಾನಕ್ಕೆ ಹೊಸ ತಂತ್ರ

ಬೇರೆಡೆ ಇದ್ದರೂ ನಿಮ್ಮ ಕ್ಷೇತ್ರಕ್ಕೆ ಮಾಡಬಹುದು ಮತದಾನ | ಗಮನ ಸೆಳೆದ ಪ್ರಾಜೆಕ್ಟ್


DECCAN HERALD

JNNCE students display their ideas through working models

App to test depression, model on railway safety, many others


ಪ್ರಜಾವಾಣಿ

ಜೆಎನ್‌ಎನ್‌ಸಿ ಕಾಲೇಜಿನಲ್ಲಿ ಪ್ರಾಜೆಕ್ಟ್ ಪ್ರದರ್ಶನ, ಸ್ಪರ್ಧೆ

ಸ್ವಯಂ ಚಾಲಿತ ಹನಿ ನೀರಾವರಿ

**INNOVATIVE PROJECT EXHIBITION-2019 20.06.2019**